ಕನ್ನಡದ ದೀಪ ಹಚ್ಚಿದ ಕವಿ

ಡಾ|| ಡಿ.ಎಸ್. ಕರ್ಕಿ

• ಪ್ರೊ. ಸಿದ್ಧಣ್ಣ ಲಂಗೋಟಿ

ಕನ್ನಡ ಜ್ಯೋತಿ ಪ್ರಕಾಶನ, ರಾಮದುರ್ಗ

ಕನ್ನಡದ ದೀಪ ಹಚ್ಚಿದ ಕವಿ

ಡಾ ॥ ಡಿ.ಎಸ್ ಕರ್ಕಿಯವರು

(ಜೀವನ-ಸಾಧನೆ)

ಪ್ರೊ ಸಿದ್ಧಣ್ಣ ಲಂಗೋಟಿ (ಚಾಂದಕವಠೆ)
ಎಂ.ಎ.(ತತ್ತ್ವಜ್ಞಾನ), ಎಲ್.ಎಲ್.ಬಿ. (ಸ್ಪೇಶಲ್)
ಎಂ.ಎ.(ಹಿಂದಿ), ಎಂ.ಎ.(ಕನ್ನಡ) ಸಿ.ವಾಯ್.ಇಡಿ(ಯೋಗ).
ರಾಮದುರ್ಗ -೫೯೧೧೨೩. ಜಿ॥ ಬೆಳಗಾವಿ

೨೦೧೩

'ಕನ್ನಡ ಜ್ಯೋತಿ' ಪ್ರಕಾಶನ
ಮಹಾಂತೇಶ ನಗರ, ರಾಮದುರ್ಗ ಜಿ॥ ಬೆಳಗಾವಿ

ಕನ್ನಡದ ದೀಪ ಹಚ್ಚಿದ ಕವಿ ಡಾ ॥ ಡಿ.ಎಸ್ ಕರ್ಕಿಯವರು

ಲೇಖಕರು : ಪ್ರೊ. ಸಿದ್ಧಣ್ಣ ಲಂಗೋಟಿ (ಚಾಂದಕವಠೆ)
ಎಂ.ಎ.(ತತ್ತ್ವಜ್ಞಾನ), ಎಲ್.ಎಲ್.ಬಿ. (ಸ್ಪೆಶಲ್)
ಎಂ.ಎ.(ಹಿಂದಿ), ಎಂ.ಎ.(ಕನ್ನಡ), ಸಿ.ವಾಯ್,ಇಡಿ(ಯೋಗ).
'ಬಸವ ಬೆಳಗು' ಮಹಾಂತೇಶ ನಗರ
ರಾಮದುರ್ಗ -೫೯೧೧೨೩. ಜಿ॥ ಬೆಳಗಾವಿ

© : ಲೇಖಕರವು

ಪ್ರಥಮ ಮುದ್ರಣ : ನವೆಂಬರ ೧೫, ೨೦೦೮
(ಕವಿ ಡಾ ॥ ಡಿ.ಎಸ್ ಕರ್ಕಿ ಅವರ
ಜನ್ಮ ಶತಮಾನೋತ್ಸವ)
ದ್ವಿತಿಯ ಮದ್ರ ಣ: ೨೦೧೩

ಪ್ರತಿಗಳು : ೧೦೦೦
ಪುಟಗಳು : ೫೬
ಬೆಲೆ : ೨೦-೦೦ ರೂ॥
ಇಪ್ಪತ್ತು ರೂಪಾಯಿಗಳು

ಪ್ರಕಾಶಕರು : ಕನ್ನಡ ಜ್ಯೋತಿ ಪ್ರಕಾಶನ
ರಾಮದುರ್ಗ -೫೯೧೧೨೩. ಜಿ॥ ಬೆಳಗಾವಿ

ಮುದ್ರಕರು : ರಾಜಶ್ರೀ ಪ್ರಿಂಟಿಂಗ್ ಪ್ರೆಸ್
ತಡಕೋಡ ಓಣಿ. ಧಾರವಾಡ -೫೮೦೦೦೧
೯೭೪೧೭೭೦೩೮೫

ಲೇಖಕರ ನಿವೇದನೆ

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ನವೋದಯ ಖ್ಯಾತ ಕವಿಯಾಗಿ, ಗದ್ಯ ಲೇಖಕರಾಗಿ, ಶಿಕ್ಷಣ ತಜ್ಞರಾಗಿ, ಆಧುನಿಕ ವಚನಕಾರರಾಗಿ, ದಕ್ಷ ಆಡಳಿತಗಾರರಾಗಿ, ಅಧ್ಯಾಪಕರಾಗಿ ಹೆಸರು ಗಳಿಸಿದ ಡಾ ॥ ಕರ್ಕಿ ಅವರ ಪರಿಚಯ ೧೯೭೨ರಲ್ಲಿ ಉಂಟಾಯಿತು. ಅವರ ಕವಿತೆಗಳನ್ನು ಓದುವ, ಅವರ ಛಂದೋವಿಕಾಸ ಅಧ್ಯಯನ ಮಾಡುವ ಭಾಗ್ಯ ನನ್ನದಾಯಿತು. ೧೯೭೨ ರಿಂದ ೧೯೮೩ ವರೆಗೆ ಆಗಾಗ ಹುಬ್ಬಳ್ಳಿ-ಧಾರವಾಡಗಳ ಸಮಾರಂಭಗಳಲ್ಲಿ ದರ್ಶನ ದೊರೆಯುತ್ತಿತ್ತು.

ಇತ್ತೀಚೆಗೆ ರಾಮದುರ್ಗ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತು ಘಟಕದಿಂದ 'ಕನ್ನಡ ಕವಿ ಕಾವ್ಯ ಪರಂಪರೆ' ಮಾಲಿಕೆಯಲ್ಲಿ ಡಾ ॥ ಕರ್ಕಿ ಅವರ ಜನ್ಮ ಗ್ರಾಮ ಹಿರೇಕೊಪ್ಪ (ಕೆ. ಎಸ್) ದಲ್ಲಿ ದಿನಾಂಕ : ೨೯-೧-೨೦೦೨ ರಂದು 'ಕರ್ಕಿಯವರ ಜೀವನ ಸಾಧನೆ' ಕುರಿತು ಉಪನ್ಯಾಸ ನೀಡಿ, ಲೇಖನ ಬರೆದು ಪ್ರಕಟಿಸಿದೆ.

ಬೆಳಗಾವಿಯ ಕನ್ನಡ ಭವನದಲ್ಲಿ ನವೆಂಬರ್ ೧೫, ೧೬, ೨೦೦೭ ರಂದು ಆಚರಿಸಿದ ಡಾ ॥ ಕರ್ಕಿ ಹಾಗೂ ಶ್ರೀ ಈಶ್ವರ ಸಣಕಲ್ಲ ಕವಿಗಳ ಜನ್ಮ ಶತಮಾನೋತ್ಸವದಲ್ಲಿ 'ಡಾ ॥ ಕರ್ಕಿ ಅವರ ಬದುಕು-ಬರಹ' ಕುರಿತು ಉಪನ್ಯಾಸ ನೀಡಿದೆ.

ಇದೇ ಅಗಸ್ಟ ೯, ೨೦೦೮ ರಂದು ಶಿವಮೊಗ್ಗದ ಕರ್ನಾಟಕ ಸಂಘದವರು ಸಂಘಟಿಸಿದ ಡಾ ॥ ಡಿ.ಎಸ್. ಕರ್ಕಿ – ನೂರರ ನೆನಪು' ಶತಮಾನೋತ್ಸವ ಸಮಾರಂಭದಲ್ಲಿ ಅತಿಥಿಯಾಗಿ ಉಪನ್ಯಾಸ ನೀಡಿದೆ.

ಕಳೆದ ಹಲವಾರು ವರುಷಗಳಿಂದ ಡಾ ॥ ಕರ್ಕಿಯವರ ಸಮಗ್ರ ಸಾಹಿತ್ಯ ಅಧ್ಯಯನ- ಚಿಂತನ ಮಾಡಿದುದರ ಪರಿಣಾಮವೇ ಈ ಪುಸ್ತಕ ರಚನೆಗೆ ಪ್ರೇರಣೆಯಾಯಿತು. ಈ ಕೃತಿ ರಚನೆಗೆ ಸಲಹೆ-ಸಹಕಾರ ನೀಡಿದ ನನ್ನ ಶ್ರೀಮತಿ ಡಾ. 'ಕಲ್ಯಾಣಮ್ಮ' ಲಂಗೋಟಿ ಅವರಿಗೂ, ಧಾರವಾಡದ ರಾಜಶ್ರೀ ಮುದ್ರಣಾಲಯದ ಶ್ರೀ ವೀರೇಶ ತಡಕೋಡ ಅವರಿಗೂ ಅನಂತ ಶರಣುಗಳು.

–ಸಿದ್ದಣ್ಣ ಲಂಗೋಟಿ

ಪರಿವಿಡಿ

ಕನ್ನಡದ ದೀಪ ಹಚ್ಚಿದ ಕವಿ

ಡಾ ॥ ಡಿ.ಎಸ್ ಕರ್ಕಿ (ಜೀವನ–ಸಾಧನೆ)

ಲೇಖಕರ ನಿವೇದನೆ		೩
೧.	ಪ್ರಾಸ್ತಾವಿಕ	೫
೨.	ಜನನ – ಬಾಲ್ಯ – ಶಿಕ್ಷಣ	೭
೩.	ಕಾಯಕ – ನೌಕರಿ ಸೇವೆ	೯
೪.	ಸಾಹಿತ್ಯ ಸಾಧನೆ	೧೧
೫.	ಡಾ ॥ ಕರ್ಕಿಯವರ ಕೃತಿಗಳ ಅವಲೋಕನ	೧೨
೬	ಕಾವ್ಯ ಕೃತಿಗಳು	೧೨
೭	ಗದ್ಯ ಕೃತಿಗಳು	೩೮
೮.	ಸಂಪಾದಿತ ಕೃತಿಗಳು	೪೨
೯.	ಕವಿ ಸಾಹಿತಿಗಳ ದೃಷ್ಟಿಯಲ್ಲಿ ಡಾ ॥ ಕರ್ಕಿ	೪೨
೧೦.	ಡಾ ॥ ಕರ್ಕಿ ಅವರ ಕೌಟುಂಬಿಕ ಜೀವನ	೪೭
೧೧.	ಡಾ ॥ ಕರ್ಕಿ ಅವರಿಗೆ 'ನಮನ' ಕವಿತೆ	೫೨
೧೨.	ಗ್ರಂಥ ಋಣ	೫೩
೧೩.	ಡಾ. ಕರ್ಕಿ ಅವರ ವಂಶ ವೃಕ್ಷ	೫೪

ಕನ್ನಡದ ದೀಪ ಹಚ್ಚಿದ ಕವಿ
ಡಾ ॥ ಡಿ.ಎಸ್ ಕರ್ಕಿ ಜೀವನ-ಸಾಧನೆ

ಪ್ರಾಸ್ತಾವಿಕ :

ಹಚ್ಚೇವು ಕನ್ನಡದ ದೀಪ

ಹಚ್ಚೇವು ಕನ್ನಡದ ದೀಪ
ಕರುನಾಡ ದೀಪ ಸಿರಿನುಡಿಯ ದೀಪ
ಒಲವೆತ್ತಿ ತೋರುವಾ ದೀಪ ॥ ಹಚ್ಚೇವು ॥

-೧-

ಬಹುದಿನಗಳಿಂದ ಮೈಮರವೆಯಿಂದ
ಕೂಡಿರುವ ಕೊಳೆಯ ಕೊಚ್ಚೇವು
ಎಲ್ಲೆಲ್ಲಿ ಕನ್ನಡದ ಕಂಪ ಸೂಸ –
ಲಲ್ಲಲ್ಲಿ ಕರಣ ಚಾಚೇವು
ನಡುನಾಡೆ ಇರಲಿ, ಗಡಿ ನಾಡೆ ಇರಲಿ
ಕನ್ನಡದ ಕಳೆಯ ಕೆಚ್ಚೇವು
ಮರೆತೇವು ಮರವ, ತೆರೆದೇವು ಮನವ
ಎರೆದೇವು ಒಲವ ಹಿಡಿ ನೆನಪ
ನರನರವನೆಲ್ಲ ಹುರಿಗೊಳಿಸಿ ಹೊಸೆದು
ಹಚ್ಚೇವು ಕನ್ನಡದ ದೀಪ

-೨-

ಕಲ್ಪನೆಯ ಕಣ್ಣು ಹರಿವನಕ ಸಾಲು
ದೀಪಗಳ ಬೆಳಕ ಬೀರೇವು
ಹಚ್ಚಿರುವ ದೀಪದಲಿ ತಾಯ ರೂಪ
ಅಚ್ಚಳಿಯದಂತೆ ತೋರೇವು
ಒಡಲೊಡಲ ಕೆಚ್ಚಿನಾ ಕಿಡಿಗಳನ್ನು
ಗಡಿನಾಡಿನಾಚೆ ತೂರೇವು
ಹೊಮ್ಮಿರಲು ಪ್ರೀತಿ, ಎಲ್ಲಿಯದು ಭೀತಿ ?
ನಾಡೊಲವೆ ನೀತಿ ಹಿಡಿ ನೆನಪ

ಮನೆ ಮನೆಗಳಲ್ಲಿ ಮನಮನಗಳಲ್ಲಿ
ಹಚ್ಚೇವು ಕನ್ನಡದ ದೀಪ

-೩-

ಕರುನಾಡಿನರಿವ ನರಿತೀವಿ ಭಾವ -
ದಲಿ ಜೀವನಾಡಿ ನುಡಿಸೇವು
ತೆರೆ ತೆರೆದ ಕಣ್ಣಿನಲಿ ನೇಹವೆರೆದು
ನವ ಜ್ಯೋತಿಯನ್ನೆ ಮುಡಿಸೇವು
ನಮ್ಮನ್ನವುಂಡು ಅನ್ಯಾಯ ಗೈಯು-
ವಂಥವರ ಹುಚ್ಚ ಬಿಡಿಸೇವು
ಇಹುದೆಮಗೆ ಛಲವು ಕನ್ನಡದ ಬಲವು
ಕನ್ನಡದ ಒಲವು - ಹಿಡಿ ನೆನಪ
ನಮ್ಮೆದೆಯ ಕೆಚ್ಚುನೆಚ್ಚುಗಳನೂಡು
ಹಚ್ಚೇವು ಕನ್ನಡದ ದೀಪ

-೪-

ನಮ್ಮವರು ಗಳಿಸಿದಾ ಹೆಸರ ಉಳಿಸ -
ಲೆಲ್ಲಾರು ಒಂದುಗೂಡೇವು
ನಮ್ಮೆದೆಯ ಮಿಡಿಯುವೀ ಮಾತಿನಲ್ಲಿ
ಮಾತೆಯನು ಪೂಜೆ ಮಾಡೇವು
ನಮ್ಮುಸಿರು ತೀಡುವೀ ನಾಡಿನಲ್ಲಿ
ಮಾಂಗಲ್ಯಗೀತ ಹಾಡೇವು
ತೊರೆದೇವು ಮರುಳ, ಕಡೆದೇವು ಇರುಳ
ಪಡೆದೇವು ತಿರುಳ ಹಿಡಿ ನೆನಪ
ಕರುಳೆಂಬ ಕುಡಿಗೆ ಮಿಂಚನ್ನೆ ಮುಡಿಸಿ
ಹಚ್ಚೇವು ಕನ್ನಡದ ದೀಪ

(ನಕ್ಷತ್ರಗಾನ)

ಈ ರೀತಿಯಾಗಿ ಕನ್ನಡದ ದೀಪ ಹಚ್ಚಿ, ಕನ್ನಡದ ಬೆಳಕನ್ನು ಕನ್ನಡ ನಾಡಿನ ಒಳಹೊರಗೆಲ್ಲ ಹರಡಿದವರು, ಕನ್ನಡಿಗರ ಹೃದಯದಲ್ಲಿ ಕನ್ನಡದ

ಪ್ರೇಮವನ್ನು ಉಕ್ಕಿಸಿದವರು ಸದವಿನಯ ಸದಾಚಾರ ಸಾತ್ವಿಕ – ಧೀಮಂತ ಕವಿ ಡಾ ॥ ಡಿ. ಎಸ್. ಕರ್ಕಿಯವರು.

ಜನನ – ಬಾಲ್ಯ – ಶಿಕ್ಷಣ

ಕನ್ನಡದ ಗಂಡುಮೆಟ್ಟಿನ ನಾಡಾದ ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲೂಕಿನ ಹಿರೇಕೊಪ್ಪ (ಕೆ.ಎಸ್) ಗ್ರಾಮದಲ್ಲಿ ಕೃಷಿ–ಕಾಯಕದ ಲಿಂಗಾಯತ ಧರ್ಮ– ಸಮಾಜ– ಸಂಸ್ಕೃತಿಯ ಕರ್ಕಿ ಮನೆತನದ ಶರಣದಂಪತಿಗಳಾದ ಶ್ರೀ ಸಿದ್ದಪ್ಪ – ಶ್ರೀಮತಿ ದುಂಡವ್ವ ಇವರ ಚಿದ್‌ಗರ್ಭದಲ್ಲಿ ೧೫–೧೧–೧೯೦೭ ರಂದು ಜನಿಸಿದ ಮಗುವೇ ಡಾ. ಡಿ,ಎಸ್. ಕರ್ಕಿಯವರು. ಇವರ ಹೆಸರು **ದುಂಡಪ್ಪ ಸಿದ್ದಪ್ಪ ಕರ್ಕಿ.**

ಶ್ರೀಯುತರು ಮೂರು ವರುಷದ ಮಗುವಿದ್ದಾಗ ತಾಯಿ ದುಂಡವ್ವ ಲಿಂಗೈಕ್ಯಳಾದಳು. ಮುಂದೆ ಕೆಲವೇ ದಿನಗಳಲ್ಲಿ ತಂದೆ ಸಿದ್ದಪ್ಪನವರು ಆಕಸ್ಮಿಕವಾಗಿ ಮೋಟಾರ ಅಪಘಾತದಲ್ಲಿ ನಿಧನರಾದರು. ಈ ರೀತಿಯಾಗಿ ಬಾಲ್ಯದಲ್ಲಿ ತಾಯಿಯನ್ನು, ತಂದೆಯನ್ನು ಕಳೆದುಕೊಂಡು ಅನಾಥನಾದ ಮಗು ದುಂಡಪ್ಪನನ್ನು ತಮ್ಮ ವಾತ್ಸಲ್ಯದಿಂದ ಬೆಳೆಸಿದವರು **ಸೋದರ ಮಾವ ಶ್ರೀ ಈಶ್ವರಪ್ಪ ಕಣಗಲಿ** ಅವರು. ಡಾ ॥ ಕರ್ಕಿಯವರ ತಾಯಿಯ ತವರೂರು ಬೆಲ್ಲದ ಬಾಗೇವಾಡಿ ಗ್ರಾಮವು. ಸೋದರಿಯ ಮಗನನ್ನು ತಮ್ಮೂರಿಗೆ ಒಯ್ದು ಮಮತೆಯಿಂದ ವಿದ್ಯೆ ಬುದ್ಧಿ ನೀಡಿ ಬೆಳೆಸಿದವರು ಸೋದರ ಮಾವ ಕಣಗಲಿ ಈಶ್ವರಪ್ಪನವರು.

ಬಾಲ್ಯದಲ್ಲಿ ತಾಯಿಯ ನೆನಪು ಮಸುಕು ಮಸಕಾಗಿಯೇ ಉಳಿದು, ಹೃದಯದ ಭಾವನೆ ಉಕ್ಕಿ ಹರಿದು ಕವಿ ಹೃದಯು ತಾಯಿಗಾಗಿ ಹಂಬಲಿಸಿತು. ಆ ಹಂಬಲವೇ ರೂಪು ತಾಳಿ, ಹೃದಯಸ್ಪರ್ಶಿ ಕವಿತೆಯಾಗಿ ಹೊರಹೊಮ್ಮಿತು. ಅದನ್ನು **ತಾಯಿ ಎಲ್ಲಿ ?.** ಎಂಬ ಕವಿತೆಯಲ್ಲಿ ಕಾಣುತ್ತೇವೆ.

ಎದೆಯ ಎದೆಯೊಳಗಿಂದ
ಕೊರಗಿನರಮನೆಯಿಂದ
ಕೂಗೊಂದು ಕೇಳುತಿದೆ : "ತಾಯಿ ಎಲ್ಲಿ
–ನನ್ನ ತಾಯಿ ಎಲ್ಲಿ"?
ಕಾಲವಾಹಿನಿಯಲ್ಲಿ
ಹಿಂದೆ ಹರಗೋಲ್ ಚೆಲ್ಲಿ

ನೆನಪು ಅರಸುತಲಿಹುದು, "ತಾಯಿ ಎಲ್ಲಿ
—ನನ್ನ ತಾಯಿ ಎಲ್ಲಿ"?

ಮೆಲು ಮೆಲ್ಲನೆ ಮೈದಡವಿ
ಚೆಲುವಿಕೆಗೆ ತಲೆ ಕೊಡಹಿ
ಕರುಳನ್ನು ಹುರಿಗೊಳಿಸಿ ಹೋದಳೆಲ್ಲಿ ?
—ನನ್ನ ತಾಯಿ ಎಲ್ಲಿ"?

ಮುಂದಲೆಯ ಸಲೆಮೂಸಿ
ಮುತ್ತಿನೊತ್ತನು ಸಲಿಸಿ
ಎದೆಯಲ್ಲಿ ಒಲವಿಟ್ಟ ತಾಯಿ ಎಲ್ಲಿ ?
—ನನ್ನ ತಾಯಿ ಎಲ್ಲಿ"?

ಅರೆಬಿರಿದ ತುಟಿ ತಟ್ಟಿ
ಚೆಂಗದಪುಗಳ ಮುಟ್ಟಿ
ಮೊಗದಲ್ಲಿ ನಗೆಯಿಟ್ಟು ಹೋದಳೆಲ್ಲಿ ?
—ನನ್ನ ತಾಯಿ ಎಲ್ಲಿ"?

ಮೊಲೆಯೂಡಿ ಹಾಲ್ನೀಡಿ
ನಲಿದು ಜೋಗುಳ ಪಾಡಿ
ಸ್ವರ್ಣ ಸ್ವಪ್ನವ ರಚಿಸಿ ಹೋದಳೆಲ್ಲಿ ?
—ನನ್ನ ತಾಯಿ ಎಲ್ಲಿ"?

ಅರ್ಥವಿಲ್ಲದ ನುಡಿಗೆ
ಅರ್ಥಗೂಡಿಸಿ ಅದಕೆ
ಕನ್ನಡದ ಕಳೆಯಿಟ್ಟ ತಾಯಿ ಎಲ್ಲಿ?
—ನನ್ನ ತಾಯಿ ಎಲ್ಲಿ"?

ಕನ್ನಡದ ನಾಡಿನಲಿ
ಚೆನ್ನದಾ ತೊಟ್ಟಿಲಲಿ
ಹೆಸರಿಟ್ಟು ಅಸುವಿಟ್ಟು ಹೋದಳೆಲ್ಲಿ ?
—ನನ್ನ ತಾಯಿ ಎಲ್ಲಿ"?

ತಾಯಿ ಮಗುವು ಆಡುವಲ್ಲಿ
ಸುಳಿವಳಿವಳು ಭಾವದಲ್ಲಿ
ಭಾವದೇವಿಯಾಗಿ ಇಳಿವಳೆನ್ನ ತಾಯಿ
– ನನ್ನ ತಾಯಿ (ನಕ್ಷತ್ರ ಗಾನ)

ಕವಿಯ ಬಾಲ್ಯದ ನೆನಪು, ಮುಗ್ಧ ಮನದ ಗರ್ಭದಿಂದ ಹೊರಹೊಮ್ಮಿದ ಈ ಕವಿತೆಯು ಸಹೃದಯರ ಅಂತಃಕರಣ ತಟ್ಟುತ್ತದೆ.

ತಾಯಿಯ ಕೊರಗಿನಲ್ಲಿ, ಸೋದರಮಾವನ ಆರೈಕೆಯಲ್ಲಿ ಬಾಲ್ಯದ ಶಿಕ್ಷಣ ಪ್ರಾರಂಭವಾಯಿತು. ಬೆಲ್ಲದ ಬಾಗೇವಾಡಿಯಲ್ಲಿ ಪ್ರಾಥಮಿಕ ಕನ್ನಡ ಶಿಕ್ಷಣ ಮೂರು ವರ್ಷ ಕಲಿತು, ಅನಂತರ ರಾಮದುರ್ಗದ ಸ್ಟೇಟ್ ಇಂಗ್ಲೀಷ ವೆರ್ನ್ಯರೀ ಸ್ಕೂಲ್‌ನಲ್ಲಿ ಎರಡು ವರ್ಷ ವಿದ್ಯಾಭ್ಯಾಸ ಪೂರೈಸಿದರು. ಅಲ್ಲಿಂದ ಬೆಳಗಾವಿಯ ಗಿಲಗಿಂಚಿ ಅರಟಾಳ ಹೈಸ್ಕೂಲಿನಲ್ಲಿ ಮಾಧ್ಯಮಿಕ ಶಾಲೆ ಓದಿದರು. ಅಲ್ಲಿಂದ ಕೊಲ್ಲಾಪುರ ರಾಜಾರಾಮ ಕಾಲೇಜಿನಲ್ಲಿ ಒಂದು ವರ್ಷ, ಪುಣೆಯ ಫರ್ಗುಸನ್ ಕಾಲೇಜಿನಲ್ಲಿ ಒಂದು ವರ್ಷ ಓದಿ, ಧಾರವಾಡಕ್ಕೆ ಬಂದು ಕರ್ನಾಟಕ ಕಾಲೇಜಿನಲ್ಲಿ ಎರಡು ವರ್ಷ ಓದಿ ಬಿ.ಎ. ಪದವಿ ಪಡೆದರು. (೧೯೩೨). ಅನಂತರ ಮುಂಬೈ ವಿಶ್ವವಿದ್ಯಾಲಯದಿಂದ ಎಂ.ಎ. (೧೯೩೫), ಬಿ.ಟಿ. (೧೯೪೦) ಉನ್ನತ ಶಿಕ್ಷಣ ಪದವಿ ಗಳಿಸಿದರು. ನೌಕರಿ ಮಾಡುತ್ತಲೇ ಪ್ರೊ. ಕೆ.ಜಿ.ಕುಂದಣಗಾರ ಅವರ ಮಾರ್ಗದರ್ಶನದಲ್ಲಿ **'ಕನ್ನಡ ಛಂದೋವಿಕಾಸ'** ಎಂಬ ವಿಷಯದ ಮೇಲೆ ಆಳವಾದ ಸಂಶೋಧನೆ ನಡೆಸಿ ಮಹಾಪ್ರಬಂಧ ಬರೆದು ೧೯೪೯ರಲ್ಲಿ ಮುಂಬೈ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿ ಪಿಎಚ್.ಡಿ ಪದವಿ ಗಳಿಸಿದರು.

ವಿದ್ಯಾರ್ಥಿ ಜೀವನದಲ್ಲಿ ಬೆಳಗಾವಿಯ ಶ್ರೀ ಗಣಪತರಾವ ಪುರಾಣಿಕ ಎಂಬ ಗುರುಗಳ ಪ್ರಭಾವಕ್ಕೊಳಗಾದರು. ಈ ಗುರುಗಳು ಮೂಲತಃ ಉತ್ತರ ಹಿಂದೂಸ್ಥಾನದಿಂದ ಬೆಳಗಾವಿಗೆ ಬಂದು ನೆಲೆಸಿದ್ದವರು. ಸ್ವತಃ ಡಾ ॥ ಕರ್ಕಿಯವರು ಸ್ಮರಿಸಿಕೊಂಡಿರುವಂತೆ – "ಶ್ರೀ ಪುರಾಣಿಕ ಗುರುಗಳು ನನಗೆ ಗುರುವಾಗಿ ದೊರೆತಿರದಿದ್ದ ಪಕ್ಷದಲ್ಲಿ ಕವಿ ಹಾಗೂ ಸಾಹಿತಿಯಾಗಿ ಯಾರೂ ನನ್ನ ಹೆಸರನ್ನು ಕೇಳುತ್ತಿರಲಿಲ್ಲ." ಈ ರೀತಿ ಪ್ರಭಾವ ಬೀರಿದ ಶ್ರೀ ಪುರಾಣಿಕ ಗುರುಗಳನ್ನು ಸದಾ ಪ್ರಾತಃಸ್ಮರಣೀಯರೆಂದು ಸ್ಮರಿಸುತ್ತಿದ್ದರು.

ಕಾಯಕ (ನೌಕರಿ) ಸೇವೆ : ಡಾ ॥ ಡಿ.ಎಸ್. ಕರ್ಕಿ ಅವರು ಎಂ.ಎ. ಶಿಕ್ಷಣ ಮುಗಿದ ನಂತರ ಕಾರವಾರದ ಸರಕಾರಿ ಹೈಸ್ಕೂಲಿನಲ್ಲಿ

ಅಧ್ಯಾಪಕರಾಗಿ ೧೯೩೫ರಿಂದ ೧೯೩೭ ವರೆಗೆ ಎರಡು ವರ್ಷ ಸೇವೆ ಸಲ್ಲಿಸಿದರು.

ಬೆಳಗಾವಿಯ ಕೆ.ಎಲ್.ಇ. ಸಂಸ್ಥೆಯ ಜಿ.ಎ. ಹೈಸ್ಕೂಲಿನಲ್ಲಿ ೧೯೩೭ರಿಂದ ೧೯೪೬ ವರೆಗೆ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು.

೧೯೪೭ ರಿಂದ ಲಿಂಗರಾಜ ಕಾಲೇಜಿನಲ್ಲಿ ಪ್ರಾರಂಭವಾದ ಗಂಡು ಮಕ್ಕಳ ಟ್ರೇನಿಂಗ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ,ಅನಂತರ ಟೀಚಿಂಗ್ ಡಿಪ್ಲೋಮಾ ವಿಭಾಗದ ಮುಖ್ಯಸ್ಥರಾಗಿ, ಶಿಕ್ಷಣ ಮನಃಶಾಸ್ತ್ರ ಕಲಿಸಿದರು.

ಪಿಎಚ್.ಡಿ ಪದವಿ ಪಡೆದ ನಂತರ ಹುಬ್ಬಳ್ಳಿಯ ಕಾಡಸಿದ್ಧೇಶ್ವರ ಆರ್ಟ್ಸ ಕಾಲೇಜಿಗೆ ಪ್ರಾಧ್ಯಾಪಕರಾಗಿ ಬಂದು ಉಪಪ್ರಾಚಾರ್ಯರಾಗಿ, ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿ ೧೯೬೬ರಲ್ಲಿ ನಿವೃತ್ತರಾದರು.

ನಿವೃತ್ತಿಯ ನಂತರವೂ ಕೂಡ ಡಾ॥ ಡಿ.ಎಸ್. ಕರ್ಕಿಯವರ ಪಾಂಡಿತ್ಯ ಅನುಭವ ಸಾಧನೆಯು ಶಿಕ್ಷಣ ರಂಗಕ್ಕೆ ಮುಂದುವರೆಯಿತು, ನರೇಗಲ್ಲ ಅನ್ನದಾನೀಶ್ವರ ಕಾಲೇಜಿನ ಪ್ರಾಚಾರ್ಯರಾಗಿ ಹುಬ್ಬಳ್ಳಿ ಮೂರುಸಾವಿರಮಠದ ಮಹಿಳಾ ಕಾಲೇಜಿನ ಪ್ರಾಚಾರ್ಯರಾಗಿ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಯು.ಜಿ.ಸಿ. ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು.

ಕರ್ನಾಟಕ ವಿಶ್ವವಿದ್ಯಾಲಯದ ಸಿನೇಟ್ ಹಾಗೂ ಸಿಂಡಿಕೇಟ್ ಸದಸ್ಯರಾಗಿಯೂ ಶ್ರೀಯುತರು ಸೇವೆ ಸಲ್ಲಿಸಿದರು.

ಕೆ.ಎಲ್.ಇ. ಸಂಸ್ಥೆಯ ಆಜೀವ ಸದಸ್ಯರಾಗಿಯೂ ಸೇವೆ ಸಲ್ಲಿಸಿದರು. ೧೯೬೮ರಲ್ಲಿ ಹುಬ್ಬಳ್ಳಿಯಲ್ಲಿ ಡಾ॥ ವಿ.ಕೃ. ಗೋಕಾಕರ ಅಧ್ಯಕ್ಷತೆಯಲ್ಲಿ ಡಾ॥ ಕರ್ಕಿ ಅವರ ಷಷ್ಠ್ಯಬ್ದಿ ಸಮಾರಂಭ ಜರುಗಿಸಿ ಗೌರವಿಸಲಾಯಿತು.

ಡಾ ॥ ಕರ್ಕಿಯವರು ಕೇಂದ್ರ ಸರಕಾರದ ಸಾಂಸ್ಕೃತಿಕ ವಿನಿಮಯ ಯೋಜನೆಯಲ್ಲಿ ೧೯೭೦ ರಲ್ಲಿ ಭಾರತದ ಸಾಹಿತಿಗಳ ಪ್ರತಿನಿಧಿಯಾಗಿ ಫ್ರಾನ್ಸ್ ಹಾಗೂ ರಶಿಯಾ ದೇಶಗಳಿಗೆ ಹೋಗಿ ಅಲ್ಲಿಯ ಜನತೆಗೆ ಭಾರತೀಯ ಸಾಹಿತ್ಯ ಸಂಸ್ಕೃತಿ – ಸಾಹಿತ್ಯದ ಪರಿಚಯ ಮಾಡಿಕೊಟ್ಟರು.

ಮೈಸೂರಿನಲ್ಲಿ ಜರುಗಿದ 'ಅಖಿಲ ಭಾರತ ಸಾಹಿತ್ಯ ಅಕಾಡೆಮಿಯ ಲೇಖಕರ ಸಭೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು.

ಬೆಳಗಾವಿಯಲ್ಲಿ ಅಧ್ಯಾಪಕರಾಗಿದ್ದ ಕಾಲದಲ್ಲಿ 'ಕಿರಿಯರ ಬಳಗ ಕಟ್ಟಿ ಸಾಹಿತ್ಯಿಕ ಚಟುವಟಿಕೆಗಳನ್ನು ನಡೆಸಿದರು. ಅಂದಿನ ಕವಿಗಳಾಗಿದ್ದ ಶ್ರೀ ಇಂಚಲ, ಶ್ರೀ ಈಶ್ವರ ಸಣಕಲ್ಲ, ಶ್ರೀ ಬ.ಗಂ. ತುರಮರಿ, ಶ್ರೀ ಅರವಿಂದ ಜೋಶಿ ಮುಂತಾದವರು ಸದಸ್ಯರಾಗಿದ್ದರು. ಈ ಕಿರಿಯರ ಸಾಹಿತ್ಯ ಬಳಗಕ್ಕೆ ನಾಡಿನ ಹಿರಿಯ ಖ್ಯಾತ ಸಾಹಿತಿಗಳಾದ ಶ್ರೀ ಅ.ನ. ಕೃಷ್ಣರಾಯ, ಶ್ರೀ ತ.ರಾ.ಸುಬ್ಬರಾವ, ಶ್ರೀ ಮಧುರಚೆನ್ನರು, ಶ್ರೀ ಸಿಂಪಿ ಲಿಂಗಣ್ಣ ಮುಂತಾದವರನ್ನು ಕರೆಯಿಸಿ ಉಪನ್ಯಾಸ ಕೇಳಿಸಿದರು. ೧೯೮೧ರಲ್ಲಿ ಧಾರವಾಡದ ಬಸವತತ್ವ ಪ್ರಸಾರ ಸಂಸ್ಥೆ ವತಿಯಿಂದ 'ಕಲಾಭವನ'ದಲ್ಲಿ ಜರುಗಿದ ವಚನ ಪಿತಾಮಹ ಫ.ಗು. ಹಳಕಟ್ಟಿಯವರ ಜನ್ಮಶತಮಾನೋತ್ಸವ ಸಮಾರಂಭದ ಕವಿಗೋಷ್ಠಿಯ ಅಧ್ಯಕ್ಷರಾಗಿ ಸ್ವರಚಿತ ಕವನವಾಚನ ಮಾಡಿ, ವಿದ್ವತ್ಪೂರ್ಣವಾದ ಉಪನ್ಯಾಸ ಮಾಡಿದರು.

ಡಾ॥ ಡಿ.ಎಸ್ ಕರ್ಕಿಯವರ ಸಾಹಿತ್ಯ – ಸಾಧನೆ :

ವಿದ್ಯಾರ್ಥಿ ದೆಸೆಯಿಂದಲೇ ಕವಿತೆಗಳನ್ನು ಬರೆಯಲು ಪ್ರಾರಂಭಿಸಿದ ಶ್ರೀ ಕರ್ಕಿಯವರು ಕನ್ನಡ ಸಾರಸ್ವತಲೋಕಕ್ಕೆ ತಮ್ಮ ಪದ್ಯ – ಗದ್ಯ ಕೃತಿಗಳಿಂದ ಅಪ್ರತಿಮವಾದ ಕೊಡುಗೆಯನ್ನು ನೀಡಿದ್ದಾರೆ. ಅವರ ಸಾಹಿತ್ಯ ಸಾಧನೆಯು ಹೀಗಿದೆ –

ಪದ್ಯ (ಕಾವ್ಯ) ಕೃತಿಗಳು:

೧.	ನಕ್ಷತ್ರಗಾನ	–	ಕವನ ಸಂಗ್ರಹ
೨.	ಭಾವತೀರ್ಥ	–	ಕವನ ಸಂಗ್ರಹ
೩.	ಗೀತ ಗೌರವ	–	ಕಥನ ಕವನಗಳು
೪.	ಕರಿಕೆ ಕಣಿಗಿಲು	–	ಕವನ ಸಂಕಲನ
೫.	ನಮನ	–	ಕವನ ಸಂಕಲನ
೬	ಬಣ್ಣದ ಚೆಂಡು	–	ಶಿಶು ಗೀತೆಗಳು
೭	ತನನ ತೋಂ	–	ಶಿಶು ಗೀತೆಗಳು
೮.	ಪದ್ಮ ಪಾಣಿ	–	ಗೀತ ರೂಪಕ

ಗದ್ಯ ಕೃತಿಗಳು :

೯.	ಕನ್ನಡ ಛಂದೋವಿಕಾಸ	–	ಪಿಎಚ್.ಡಿ. ಮಹಾಪ್ರಬಂಧ
೧೦.	ನಾಲ್ದೆಸೆಯ ನೋಟ	–	ಲೇಖನ ಸಂಗ್ರಹ
೧೧.	ಮಕ್ಕಳ ಶಿಕ್ಷಣ	–	ಪ್ರಬಂಧ

೧೨. ಐವರು ಶಿಕ್ಷಣ ತಜ್ಞರು ಹಾಗೂ ಬೋಧನಾ ಕ್ರಮ
೧೩. ಸಾಹಿತ್ಯ – ಸಂಸ್ಕೃತಿ – ಶ್ರುತಿ – ಲೇಖನ ಸಂಗ್ರಹ
೧೪. ಅಂಗಡಿ ದಂಪತಿಗಳು – ಜೀವನ ಚರಿತ್ರೆ

ಸಂಪಾದಿತ ಕೃತಿಗಳು :

೧೫. ಬಸವಣ್ಣನವರ ಜನಪ್ರಿಯ ವಚನಗಳು
೧೬. ಶರೀಫರ ಲೋಕಪ್ರಿಯ ಪದಗಳು

ಡಾ॥ ಡಿ.ಎಸ್ ಕರ್ಕಿ ಅವರ ಕೃತಿಗಳ ಅವಲೋಕನ : ಕಾವ್ಯ ಕೃತಿಗಳು:

ನವೋದಯದ ಮಹಾನ್ ಕವಿ ಡಾ ॥ ಡಿ.ಎಸ್ ಕರ್ಕಿ ಅವರು ೧೯೩೪ರಿಂದ ೧೯೮೪ ವರೆಗೆ ಐದು ದಶಕಗಳ ಕಾಲ ಕನ್ನಡ ಸಾಹಿತ್ಯ ರಚನೆಯಲ್ಲಿ ನಿರತರಾಗಿದ್ದರೆಂದು ತಿಳಿದು ಬರುತ್ತದೆ. ವಿದ್ಯಾರ್ಥಿ ದೆಸೆಯಿಂದಲೇ ಬರೆಯಲು ಪ್ರಾರಂಭಿಸಿದ್ದರೂ ಕೂಡ ಅವರ ಮೊದಲ ಕನ್ನಡ ಕವನ ಸಂಕಲನ 'ನಕ್ಷತ್ರಗಾನ' ಪ್ರಕಟವಾಗಿ ಬೆಳಕಿಗೆ ಬಂದುದು ೧೯೪೯ರಲ್ಲಿ.

ನಕ್ಷತ್ರಗಾನ : ಈ ಕವನ ಸಂಕಲನದಲ್ಲಿ ೪೨ ಕವಿತೆಗಳಿವೆ. ಈ ಕವನ ಸಂಕಲನದ ಮೊದಲ ಕವಿತೆಯೇ ನಕ್ಷತ್ರಗಾನವಾಗಿದೆ. ಹಗಲಿರುಳೆನ್ನದೆ ಗಗನಾಂಗಣದಲ್ಲಿ ಯಾವುದೋ ಭಾವದ ತಾಳಕೆ ಚರಣಂಗಳ ಚೆಲ್ಲಿ ನಾದಗೈವ ನಕ್ಷತ್ರಗಳ ರಮಣೀಯ ಗಾಯನದ ಅಂತರನಾದ ಹೊರಹೊಮ್ಮಿದೆ. ಕವಿ ಹೃದಯ ಅದನು ಕೇಳಿ ಆನಂದಿಸಿದೆ.

ನಕ್ಷತ್ರ ಗಾನ

ಹಗಲೆನ್ನದೆ ಇರುಳೆನ್ನದೆ ಗಗನಾಂಗಣದಲ್ಲಿ
ಯಾವುದೋ ಭಾವದ ತಾಳಕೆ ಚರಣಂಗಳ ಚೆಲ್ಲಿ
ದೂರದಿ ತೂರುವ ಕಿರಣ ಶ್ರೇಣಿಯ ತಾನದಲಿ
ಹೊರಗಿವಿಗೈದದ ಗಾನವಗೈವವು ಮೇಳದಲಿ
    ಮುಗಿಯದ ಮುಗುಲಿನ ಕಡಲಲಿ ನಲಿನಲಿದೀಸುವೆವು
    ಯುಗಯುಗದಲಿ ಅಚ್ಚಳಿಯದ ನಗೆಯನು ಸೂಸುವೆವು
    ಬಯಲಿಗೆ ಬಗೆಬಗೆ ರಾಗದ ಬಲೆಯನು ಬೀಸುವೆವು
    ಮಂಗಳ ಗೀತಂಗಳೊಳಾತ್ಮಂಗಳ ಮೀಸುವೆವು
ಋತು ಋತುಗಳು ತಳೆಯುವ ರತಿ ಇಳಿಯುವುದೆಮ್ಮಿಂದ
ಮನ ಮನದಲಿ ಮೂಡುವ ಮತಿ ಸುಳಿಯುದೆಮ್ಮಿಂದ

ಅನುರಾಗಕೆ ಅನುರಾಗವ ಮೇಳಿಪುದೆಮ್ಮಿಂದ
ಇಂತೊಗೆಯುತಲಿದೆ ಸಂತತ ಆಂತರ್ಯದ ಛಂದ

(ನಕ್ಷತ್ರಗಾನ)

ಕವಿ ಡಾ॥ ಡಿ.ಎಸ್. ಕರ್ಕಿಯವರು ೧೯೩೫-೩೭ ಕಾರವಾರದ ಸರ್ಕಾರಿ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿದ್ದ ಕಾಲದಲ್ಲಿ ಬರೆದ 'ಕಾರವಾರ' ಎಂಬ ಕವಿತೆಯಲ್ಲಿ ಅಲ್ಲಿಯ ಸೃಷ್ಟಿ ಸೌಂದರ್ಯವು ಹೃದಯಂಗಮವಾಗಿ ಹೊರಹೊಮ್ಮಿದೆ.

ಕಾರವಾರದಲೊಂದು ಚೆಂದದ ಮನೆಯನು
ಮಾಡಿಹೆವು- ನಾವು - ಮಾಡಿಹೆವು.
ಸಿಂಗಾರರಸದಿಂದ ತುಂಬಿದ ಬಾಳನು
ಬಾಳಿಹೆವು - ನಾವು - ಬಾಳಿಹೆವು

ಕಾರವಾರವನಾಳ್ವ ಸೃಷ್ಟಿದೇವಿಯ ಚೆಲ್ವ
ಬನಬನದಲಿ ಜೋಲ್ವ ಜೋಕಾಲಿಯಲಿ ನಮ್ಮ
ಬಾಲರಾಜನ ನೋಡಿ, ನಲಿದು ಜೋಗುಳ ಹಾಡಿ
ತೂಗಿಹೆವು ನಾವು ತೂಗಿಹೆವು
ಆನಂದವನೆ ಉಂಡು ತೇಗಿಹೆವು.

ಆಚೆ ಹಸಿರುಗಿರಿ ಈಚೆ ಸಾಗರ ನೀಲಿ
ಹಬ್ಬಿರೆ ಹೊಗರೇರಿ ಮಧ್ಯದ ಮಳಲಲಿ
ಗುಬ್ಬಿ ಗೂಡನು ಮಾಡಿ ತೀಡುವ ಎಲರಲಿ
ರಾಜನಾ 'ಗಾಗೂ' ಕೇಳಿಹೆವು.
ಬಗೆ ತೆರೆದ ಮುಗಿಲಲ್ಲಿ ತೇಲಿಹೆವು.

ಮುಂದು ಮೊರೆವ ತೆರೆ, ತೆರೆಯ ಕೊನೆಯ ನೊರೆ-
ಯಿಂದ ರಂಜಿಪ ಮೇರೆಯರಿಯದ ಕಡಲೇರಿ
ಬೆಳ್ದಿಂಗಳಿರುಳಲ್ಲಿ ಬೆಳಕಿನಾ ಹೊನಲಲ್ಲಿ
ಎದೆಯ ದೋಣಿಯ ತೇಲಿ ಬಿಟ್ಟಿಹೆವು.
ಗಗನ ಗೋಪುರಗಳ ಕಟ್ಟಿಹೆವು.....

(ನಕ್ಷತ್ರಗಾನ)

ಡಾ॥ ಕರ್ಕಿ ಅವರ ಲಿಪಿ–ಲತೆ ಎಂಬ ಕವನವು ಕನ್ನಡ ಅಕ್ಷರಗಳ ರೂಪ, ಆಕಾರ, ಚೆಲುವು, ವೈವಿಧ್ಯತೆ ಹಾಗೂ ಪ್ರಾಚೀನತೆ ಬಿಂಬಿಸುವುದರ ಜೊತೆಗೆ ಕನ್ನಡಿಗರ ಕಲಾಪ್ರಜ್ಞೆಯನ್ನು ಪರಿಚಯಿಸುತ್ತದೆ.

ಎಂಥ ಚಂದದ ಬಳ್ಳಿ ಚೆಲ್ಲವರಿದಿಹುದಿಲ್ಲಿ
ಚೆಲುವನರಸುವ ಜಾಣ ಬಂದು ನೋಡು
ಕನ್ನಡದ ಲಿಪಿಯಲ್ಲಿ ಕನ್ನಡದ ಕಲೆ ಎಲ್ಲೆ–
ಯನೆ ನಿಲುಕಿ ನಿಂದಿಹುದ ನೋಡಿ ಹಾಡು

ನಾದ ಸೊಬಗೇ ಮರಳಿ ನಾಡಿಗರ ಹೃದಯದಲಿ
ಹೊಳೆದು ಕರದಿಂದಿಳಿದು ಬಂದಿರುವುದೇ?
ಹೂಬಳ್ಳಿಯಂದದಲಿ ಸುಳಿದಿಂತು ಚಂದದಲಿ
ಲಿಪಿಯ ರೂಪವನಾಂತು ನಿಂದಿರುವುದೇ?

ಮೊಗ್ಗಿನಂದದಿ ಕೆಲವು ಮಲರಿನಂದದಿ ಹಲವು
ಕುಡಿ, ಹೀಚು, ಮಿಡಿ ಕಾಯ್ಗಳಂತೆ ಕೆಲವು
ಕನ್ನಡಕ್ಕರಗಳಿವು ಬಳ್ಳಿಯನು ಏರಿಹವು
ಬಗೆಯ ಬಳ್ಳಿಯನೆ ಅಲ್ಲಾಡಿಸುವುವು.

ಕಲ್ಲಿನಲಿ, ಕಾವ್ಯದಲಿ, ಓಲೆಯಲಿ, ಲೋಹದಲಿ,
ಭಿತ್ತಿಯಲಿ ಈ ಬಳ್ಳಿ ಸುಳಿದಿರುವುದು,
ಚಾಲುಕ್ಯ ಕಲಚೂರ್ಯ ಹೊಯ್ಸಳಾಧೀಶ್ವರರ
ಯುಗಗಳಲಿ ಹೊಗರೇರಿ ಹರಡಿರುವುದು.

ಕನ್ನಡಿಗರಾಂತರ್ಯದಿಂದಲೀ ಸೌಂದರ್ಯ
ಲತೆ ಕೊನರಿ ನನೆ ಕೊನೆಯ ತಳೆದು ಬೆಳೆದು
ಕನ್ನಡಮ್ಮನ ಕೊರಳ ಸರಕೆ ಮಲ್ಲಿಗೆಯರಳ
ಸಲ್ಲಿಸುವುದವಳಡಿಯ ಬಳಿಗೆ ಸುಳಿದು.

(ನಕ್ಷತ್ರಗಾನ)

'ಸರಿಗಮ' ಎಂಬ ಬಾಳ ನೌಕೆಯನ್ನು ಮುನ್ನಡೆಸಲು ದೇವನಲ್ಲಿ 'ಬಾಳ ನಡೆಸು' ಎಂದು ಪ್ರಾರ್ಥಿಸುತ್ತಾರೆ.

ತಾಳ ಲಯದಲಿ ಬಾಳ
ನಡೆಸು ದೇವಾ
ನಿನ್ನ ಚಿತ್ತದ ಸಂಗ-
ದಿಂದ ಭಾವ ತರಂಗ
ನೆಗೆದು ಬಾಳ್ ರಸರಂಗವಾಗುವಂತೆ –

ಹಗಲು ಸೂರ್ಯನ ಕಿರಣ
ಇರುಳು ಚಂದ್ರನ ಕಿರಣ –
ಗಳಿಗೆ ಅಂತ:ಕರಣ ಸ್ಫುರಿಸುವಂತೆ–

ನಾಳ ನಾಳಗಳಲ್ಲಿ
ನರ್ತನದ ಗತಿಯಲ್ಲಿ
ಜೀವ ಉತ್ಸಾಹದಲಿ ಚಲಿಸುವಂತೆ –

'ಸರಿಗಮ'ದ ನದಿಯಲ್ಲಿ
ಹರಿಗೋಲ ತೆರದಲ್ಲಿ
ನನ್ನ ಜೀವನ ತೇಲಿ ಸಾಗುವಂತೆ

(ನಕ್ಷತ್ರಗಾನ)

ಪ್ರಕೃತಿ ಪ್ರೇಮಿಯಾದ ಕವಿ ಕರ್ಕಿಯವರು 'ಮಲ್ಲಿಗೆಗೆ' ಎಂಬ ಕವಿತೆಯಲ್ಲಿ ಮಲ್ಲಿಗೆಯ ಕೋಮಲತೆ, ಸೌಂದರ್ಯವನ್ನು ಹೃದಯಂಗಮವಾಗಿ ವರ್ಣಿಸುತ್ತಾ ಅದರ ಚೆಲುವಿನ ಮೊಗದಲ್ಲಿ ತುಳುಕುವ ಆನಂದವನ್ನು ಅನುಭವಿಸುತ್ತಾ ಸಹೃದಯರಿಗೆ ಎಡೆಮಾಡುತ್ತಾರೆ–

ಮಲ್ಲಿಗೆಗೆ

ಎಲೆ ಎಲೆ ಮಲ್ಲಿಗೆ ಬಳುಕುವೆ ಮೆಲ್ಲಗೆ
ಬಳ್ಳಿಯ ಮೇಲೇರಿ
ಬೀಸುವಗಾಳಿಗೆ ಸೂಸುವೆ ಸೌರಭ
ಅನುರಾಗವ ಬೀರಿ

ಚಿಕ್ಕಿಯ ತೆರದಲಿ ನಕ್ಕು ನಲಿವೆ ನೀ
ನಿರ್ಮಲ ಹರ್ಷದಲಿ
ನಿನ್ನೀ ತಿಳಿನಗೆ ಸೆರೆಹಿಡಿವುದು ಬಗೆ –
ಯನು ಅರೆ ನಿಮಿಷದಲಿ
ಹಸುರೆಲೆಗಳ ಮರೆಯಲಿ ನೀನವಿತಿರೆ
ಸುಳಿಗಾಳಿಯ ಸೂಸಿ '
ಮುಸುಕನು ನಸು ಓಸರಿಸಲು ಎಸೆವುದು
ನಿನ್ನ ರೂಪರಾಶಿ

ಗಾತ್ರವೋ ಕಿರಿದು, ಗುಣವೋ ಹಿರಿದು ;
ಇದೇ ನಿನ್ನ ರಹಸ್ಯ
ಕಿರಿ ರೂಹಿನಲಿ ಅರಳಿದೆ ತರಳೆ
ಜೀವನ – ಸ್ವಾರಸ್ಯ

ನಿನ್ನೊಳು ಸರಳತೆ ಸೌಂದರ್ಯದ ಜತೆ –
ಯಲಿ ಬಾಳುತಲಿಹುದು
ನರುಗಂಪಿನ ಸಿರಿ ಒಲವಿನ ನಲವಿನ
ಕತೆ ಹೇಳುತಲಿಹುದು !

ಈ ಬೆಳಕು ಬೆಳುನಗೆಯಲಿ ಚೆಲುವಿನ
ಮೊಗದಲಿ ಆನಂದ
ಅದಾವ ಪೂರ್ವದ ಉದಾರ ಹೃದಯವು
ಚೆಲ್ಲಿದ ಪ್ರತಿಬಿಂಬ !

(ನಕ್ಷತ್ರಗಾನ)

ಕವಿ ರವೀಂದ್ರರ ಬಗ್ಗೆ ಡಾ॥ ಕರ್ಕಿಯವರಿಗೆ ಅತ್ಯಂತ ಪ್ರೀತಿ. ಅವರ ಕವಿತೆಗಳನ್ನೆಲ್ಲ ಅಧ್ಯಯನ ಮಾಡಿರುವ ಕವಿಯು ಅನೇಕ ಕವಿತೆಗಳನ್ನು ಆಂಗ್ಲ ಭಾಷೆಯಿಂದ ಕನ್ನಡಕ್ಕೆ ಅನುವಾದಿಸಿದ್ದು ತಿಳಿದುಬರುತ್ತದೆ. "ಕವಿ ರವೀಂದ್ರ" ಕುರಿತು ಬರೆದ ಕವಿತೆಯ ಕೆಲವು ಸಾಲುಗಳಲ್ಲಿ ವ್ಯಕ್ತಿತ್ವದರ್ಶನವಿದೆ –

ಕವಿಯೇ ಜೀವನ – ರವಿಯೇ ಸ್ವರದಲಿ
ಬಾಳನು ನೇಯ್ದಿರುವೆ

ಮೀಯಿಸಿ ಭುವನದ ನವನವ ರಸದಲಿ
        ಬಣ್ಣ ಹೊಯ್ದಿರುವೆ
ಕಲ್ಪನೆ – ಕಿರಣಂಗಳಿಂ ಹೊಂಬೆಳಗಿನ
        ಲೋಕವ ರಚಿಸಿರುವೆ
ಅದರಲಿ ಚೆಲುವಿನ ಒಲವಿನ ನಲುವಿನ
ಹೊನಲನು ಹರಿಸಿರುವೆ .....

ನಿನ್ನ ಸಂಗದಲಿ ಕಾವ್ಯ ಗಂಗೆಯಲ್ಲಿ
        ತೇಲಿತು ಜಡಜಗವು
ನಿನ್ನ ಕೀರ್ತಿಯಲಿ ವಿಮಲ ಸ್ಫೂರ್ತಿಯನು
        ತಾಳಿತು ಭಾರತವು

(ನಕ್ಷತ್ರಗಾನ)

೧೯೪೭ ಅಗಸ್ಟ ೧೫ ರಂದು ಭಾರತವು ಬ್ರಿಟಿಶರ ಗುಲಾಮಗಿರಿಯಿಂದ ಮುಕ್ತವಾಗಿ, ಸ್ವತಂತ್ರವಾದಾಗ ಕವಿ ಕರ್ಕಿಯವರು ಅದನ್ನು ಹಾರ್ದಿಕವಾಗಿ ಸ್ವಾಗತಿಸುವ ಪರಿ ಹೀಗಿದೆ –

'ಸ್ವಾತಂತ್ರ್ಯಕ್ಕೆ ಸ್ವಾಗತ' ಕವಿತೆಯಲ್ಲಿ –

ಬಾ ; ಉಸಿರೆ, ಬಾ
ಹೊಸತು ಬಂದ, ನಾಡಿನುಸಿರೆ
ಹೊಸತಿಲಲ್ಲಿ ಬಾ,
ಎದೆಯ ಎದೆಯ ಕರೆಯ ನಂಬಿ
ನಾಡಿ ನಾಡಿಗಳಲಿ ಹೊಮ್ಮಿ
ಜೀವ ತುಂಬಿ ಭಾವತುಂಬಿ
        ಬಾಳ ತುಂಬಿ ಬಾ

ಹೊಸತಿಲಲ್ಲಿ ರಂಗವಲ್ಲಿ
ತಳಿರು ತೋಂಗಲಲ್ಲಿ
ಕಣ್ಗೆ ಕಣ್ಗೆ ಚೆಲುವ ಚೆಲ್ಲಿ
        ಕರೆವುತಿಹೆವು ಬಾ ....

(ನಕ್ಷತ್ರಗಾನ)

ಡಾ ॥ ಕರ್ಕಿ ಅವರಿಗೆ ಕನ್ನಡದ ಪ್ರಪ್ರಥಮ ಕವಿಕೋಗಿಲೆ ಮಹಾದೇವಿಯಕ್ಕಳ ಬಗ್ಗೆ ಅಪಾರ ಭಕ್ತಿ – ಗೌರವ. **'ಅಕ್ಕಮಹಾದೇವಿ'** ಎಂಬ ಕವನದಲ್ಲಿ ಅಕ್ಕನ ಘನ ವ್ಯಕ್ತಿತ್ವ ದರ್ಶನ ಮಾಡಿಸುತ್ತಾರೆ –

ನಮ್ಮ ನಾಡಿನಾವ ಪುಣ್ಯದಿಂದ ದೇವಿಯೇ
ಚೆನ್ನನೊಲಿದ ರನ್ನೆ, ನೀನು ಮೂಡಿ ಬೆಳಗಿದೆ ?
ಥಳ ಥಳನೆ ತೊಳಗಿದೆ!

ನಿನ್ನ ಸ್ಥೈರ್ಯವೆಂಥದಮ್ಮ, ಧೈರ್ಯವೆಂಥದು!
ನೀನು ಮೆಚ್ಚಿ ನೆಚ್ಚಿ ನಿಂದ ಅಮೋಘ ಯೋಗವೆಂಥದು!
ಮನ ವೆತ್ತುವಂಥದು, ಮೇಲಕೆತ್ತುವಂಥದು

(ನಕ್ಷತ್ರಗಾನ)

ಗ್ರಾಮೀಣ ಭಾರತದ, ಹಳ್ಳಿಗಳ ಜನರ ಬಾಳಿನ ಉಸಿರು ಪ್ರಾಣ ಜೀವನಾಧಾರ ಬೀಸುವ ಕಲ್ಲು, ಜಾನಪದ ಗರತಿಯರ ಹಾಡಿನ ಒರತೆ ಅದು. ಇಂದಿನ ಆಧುನಿಕ ಯುಗದಲ್ಲಿ ಅದು ಎಲ್ಲಿಯೋ ಮರೆಯಾಗಿ ಹೋಗಿದೆ, ಗರಗರನೆ ತಿರುಗದೇ ಕುಳಿತಿದೆ. 'ತಿರುಗದ ಬೀಸುವ ಕಲ್ಲಿಗೆ' ಎಂಬ ಕವಿತೆಯಲ್ಲಿ – "ಕವಿಯು ವಿನಂತಿಸುತ್ತಾನೆ" – ಮೊದಲಿನಂದದಿ ಮಲ್ಲೆ ದನಿಯೆತ್ತಿ ಹಾಡೇಳು, ತೆರೆಯಲಿ ಹಿಂದಿನ ಇಂದ್ರಲೋಕ ಎಂಬಲ್ಲಿ ರಮಣೀಯತೆ ಈ ಕವಿತೆಯಲ್ಲಿದೆ.

ತಿರುಗದ ಬೀಸುವ ಕಲ್ಲಿಗೆ

ಬೀಸುವ ಕಲ್ಲೆ ನೀ ಪ್ರಾಸದ ಹಿನ್ನೆಲೆ
ಗರತಿಯ ಹಾಡಿನ ಒರತೆ ನೀನು!
ಯಂತ್ರದ ಯುಗದಲು ಅಂತರಂಗವ ಕೇಳ್ವ –
ರಿಲ್ಲೆಂದು ನೀ ಸುಮ್ಮನಾದೆಯೇನು?

ಮನೆಯಲಿ ನೀ ದನಿದೋರಲು ಗಂಧರ್ವ
ಗಾನವೆ ಇಳೆಗಿಳಿದಾಡುತ್ತಿತ್ತು
ಮಂಗಳೆಯರ ದನಿ ಮಾರ್ದನಿಗೊಡಲಾಗ
ಮಂಗಳ ಮನದಲಿ ಮೂಡುತಿತ್ತು

ಬೆಳಗಿನ ಸುಳಿಗಾಳಿ ನಿನ್ನ ಹುಮ್ಮಸ ತಾಳಿ
ಜೀವಕೋಟಿಗೆ ಭಾಗ್ಯ ಬೀರುತಿತ್ತು
ಕೈಯ ಸೂಟಿಗೆ ಕಲ್ಲು ಗರಗರ ತಿರುಗಲು
ಬಾಳಿಗೆ ಹೊಸಕಳೆ ಏರುತ್ತಿತ್ತು

ನಿನ್ನ ಸಂಗದಿ ಸಂಗೀತ ರಸದಲಿ
ಜಗವೆಲ್ಲ ಹಗುರಾಗಿ ತೇಲುತಿತ್ತು
ರಸಿಕರ ಕಣ್ಮುಂದೆ ಚಂದಿರಲೋಕವೆ
ತೆರೆದಂತೆ ಮೈ ನವಿರೇಳುತಿತ್ತು.

ಮುಕ್ಕು ಮುಕ್ಕಿನ ಕೂಡ ಚೊಕ್ಕು ಚೊಕ್ಕಿನ ತಾನ
ಹೆಂಗಳ ಕೊರಳಿಂದ ಹೊಮ್ಮುತಿತ್ತು
ಸಕ್ಕರೆನಿದ್ದೆಯಿಂದೆಚ್ಚೆತ್ತ ಮಕ್ಕಳ
ಮನದಲಿ ಮಂದಾರವರಳುತಿತ್ತು

ಇತ್ತೀಚೆ ನೀ ನಾಚಿ ಹೀಗೇಕೆ ತುಟಿ ಮುಚ್ಚಿ
ಮರೆಯಲ್ಲಿ ಒರಗಿಹೆ ಮರೆತು ಸುಖ?
ಮೊದಲಿನಂದದಿ ಮತ್ತೆ ದನಿಯೆತ್ತಿ ಹಾಡೇಳು
ತೆರೆಯಲಿ ಹಿಂದಿನ ಇಂದ್ರಲೋಕ

(ನಕ್ಷತ್ರಗಾನ)

೨. ಭಾವತೀರ್ಥ : ಡಾ॥ ಡಿ.ಎಸ್. ಕರ್ಕಿ ಅವರ ಎರಡನೆಯ ಕವನ ಸಂಕಲನವಿದು. ಇದರಲ್ಲಿ ೨೦ ಕವಿತೆಗಳಿವೆ. ನಮ್ಮ ನಾಡಿನ ಐತಿಹಾಸಿಕ, ಧಾರ್ಮಿಕ, ಸಾಂಸ್ಕೃತಿಕ ಮಹತ್ವ – ಮಹಿಮೆ ಸಾರುವ ಶ್ರೇಷ್ಠ ಕವಿತೆಗಳಿವೆ. 'ಭಾವತೀರ್ಥ' ಎಂಬ ಮೊದಲ ಕವಿತೆಯು ಈ ಸಂಕಲನಕ್ಕೆ ಅನ್ವರ್ಥಕವಾಗಿದೆ–

ಸಾರಮಯವಲ್ತೆ ಸಂಸಾರವಿದು "ಕೋ ಚೆಲುವ
ನೋಡೆಂ"ಬ ನಾಡಿನಲಿ ಬಾಳೆಂಬ ಹೊಳೆ ಹರಿಯೆ
ನೇತ್ರ ನೇತ್ರಕೆ ಕ್ಷೇತ್ರ ಕ್ಷೇತ್ರ ಕ್ರಾಂತಿಯ ಸುರಿಯೆ
ನರ್ತಿಸುವ ಸೌಂದರ್ಯ – ಛಂದಕ್ಕೆ ಸ್ಪಂದಿಸುವ
ಜೀವ ಜೀವದಿ ಕ್ರೀಡೆಯಾಡೆ ಬಂಧುರ ಭಾವ
ತಾನೆ ಸಂಜನಿಸದೆ ರಸಾನುಭವ – ಮಕರಂದ?

ಒಳಹೊರಗುಗಳನಿಂತು ಮಧುರ ಮೇಳದೊಳಾವ
ಚದುರ ಕೆಳೆಗೊಳಿಸಿಹನು ತುಳುಕುವೊಲು ಆನಂದ!

ಸುಳಿದು ಬಾ, ಎಲೆ ಜೀವ, ಚೆಲುವಾಡುವೆಡೆಗಳಲಿ,
ತೆರೆದಿರಿಸಿ ಕರಣ ಕರಣದ ರೂಪ, ರಸ, ಗಂಧ
ಶಬ್ದ, ಸಂಸ್ಪರ್ಶಗಳ ರುಚಿಗೊಂಡು ಶುಚಿಯಲ್ಲಿ
ಮೃದು ಮಧುರ ಸುಂದರೋದಾರ ಲೋಕಕೆಸಂದ
ಸಾಮರಸ್ಯದ ಸೌಖ್ಯ ಜೀವನದ ಪರಮಾರ್ಥ
ಮಿಂದೇಳು, ನಿನ್ನೊಳಗೆ ತೆರೆಯಾಡುತಿದೆ ತೀರ್ಥ!

'ತುಂಗಭದ್ರೆಯ ಹಾಡು' ಎಂಬುದು ಆರು ಪ್ರವಾಹಗಳಲ್ಲಿ ಒಟ್ಟು ೨೮ ಸಾಲುಗಳ ನೀಳ್ಗವನವಾಗಿದೆ. ವಿಜಯನಗರ ಸಾಮ್ರಾಜ್ಯದ ಭವ್ಯತೆ, ಅಲ್ಲಿಯ ಕಲೆ, ಸಂಸ್ಕೃತಿ – ಅದರ ಕೀರ್ತಿಯ ಚಿತ್ರಣವು ರಮ್ಯೋಜ್ವಲವಾಗಿ ಕಾವ್ಯವಾಗಿ ಹೊರಹೊಮ್ಮಿದೆ –

ತುಂಗಭದ್ರೆಯ ಹಾಡು

ಹರಿಯುತಿರುವೆನು ಬಾಳನೆಂತೋ ನೂಕುತ
ಹೋದ ಹಗಲನು, ಬಂದ ಇರುಳನು, ನೊಂದ ಮನದಲಿ ತೂಗುತ॥

ಬಾರ ಯಾತ್ರಿಕ, ಬೆರಗಿನರಮನೆ ಕಟ್ಟಿ ನವಿರನು ತಾಳುತ
ಸುತ್ತಲೀಕ್ಷಿಸಿ ಹತ್ತು ಸಾವಿರ ಪ್ರಶ್ನೆ ಶೂನ್ಯಕೆ ಕೇಳುತ
ಉತ್ತರಿಸುವೆನು ಇಳಿದು ಬಂದರೆ ನನ್ನ ಹೊನಲಲಿ ತೇಲುತ
ಹಿಂದು ಹಿಂದಕೆ ಹುಟ್ಟು ಹಾಕುತ ಕೌತುಕದ ಕಡಲಾಳುತ ......

(ಭಾವತೀರ್ಥ)

ಶಿವಯೋಗ ಮಂದಿರ ಎಂಬ ಕವಿತೆಯು –

ಇದೋ ಮಂದಿರ ಶಿವ ಮಂದಿರ
ಶಿವಯೋಗದ ಮಂದಿರ
ಪ್ರಕೃತಿಯ ಪರಮಾನಂದದ
ಸುಧೆ ಸೂಸುವ ಚಂದಿರ

(ಭಾವತೀರ್ಥ)

ಪ್ರಕೃತಿಯ ಪರಮಾನಂದದ ಸುಧೆ ಸೂಸುವ ಚಂದಿರದಂತಿರುವ ಶಿವಯೋಗ ಮಂದಿರವನು ಕಂಡು ಕವಿಹೃದಯ ನತಮಸ್ತಕವಾಗಿ ಬಾಗುತ್ತದೆ.

ಬಾ, ಬಾದಾಮಿಗೆ ಎಂಬ ಕವಿತೆಯಲ್ಲಿ – ಚಾಲುಕ್ಕ ಸಾಮ್ರಾಜ್ಯದ ವೈಭವವನು ನೋಡಲು ಬನ್ನಿ ಎಂದು ಕಳಕಳಿ ವ್ಯಕ್ತಪಡಿಸುತ್ತಾರೆ.

ಬಾ ಗೆಳೆಯ ಬಾ ಹಳೆಯ ಬಾದಾಮಿಗೆ ಇಲ್ಲಿ
ಚಾಲುಕ್ಯರ ಲಾಲಿತ್ಯದೊಳಾಳಿದ ತಾಣದಲಿ
ಬೆಳಬೆಳಗುವ ಬೆಳುವಲದಲಿ
ಬೆಟ್ಟದ ಈ ಬಂಡೆಗಳಲಿ
ಕಂಡರಿಸಿದ ಕಲ್ಮನೆಯಲಿ
ಅಪ್ರತಿಮಾನಂದದ ಪ್ರತಿ ಬಿಂಬಗಳನು ಚೆಲ್ಲಿ
ನೆಟ್ಟಿಹರಿದೋ ನೈಪುಣ್ಯದ ಬಾವುಟವನೇ ಇಲ್ಲಿ

(ಭಾವತೀರ್ಥ)

ಅಲ್ಲಿಯೇ **'ಪಟ್ಟದಕಲ್ಲು'** ಎಂಬ ತಾಣವಿದೆ ಕಲಿನಲಿ ಕೊರೆದು ಸಂಸ್ಕೃತಿಯ ಶಿಲ್ಪದಾರತಿ ಎಂದು ತೋರುತ್ತಾರೆ –

ಜಾರಿ ಹೋಗಿವೆ ಎನಿತೊ ಎನಿತೊ ತಲೆಮಾರು
ಗುರುತಿಟ್ಟು ಚಾಲುಕ್ಯ ಚರಿತೆಯಲಿ ನೂರು
ಮೊದಲು ಐಹೊಳೆಯಲ್ಲಿ
ಬಳಿಕ ಬಾದಾಮಿಯಲಿ
ಕೊರೆದು ಸಂಸ್ಕೃತಿಯ
ಎತ್ತಿಹರು ನಮ್ಮವರು ಶಿಲ್ಪದಾರತಿಯ

(ಭಾವತೀರ್ಥ)

'ಐಹೊಳೆ' ಎಂಬ ಕವಿತೆಯಲ್ಲಿ ಕರ್ನಾಟಕದ **'ವಿದ್ಯಾಪೀಠ'** ದೇಶದಲಿ ಪ್ರಥಮತ: ಕಟ್ಟಲ್ಪಟ್ಟಿದ್ದು ನಾಡ ಜನತೆಗೆ ಆತ್ಮ ವಿದ್ಯೆಯನು ಅರುಹಿದರು ಎಂದು ಅಭಿಮಾನದಿಂದ ಅರುಹುತ್ತಾರೆ ಡಾ ॥ ಕರ್ಕಿಯವರು.

ಐಹೊಳೆ

ಲಿಂಗಮಯ ನಂದಿಮಯವಾಗಿಹುದು ಐಹೊಳೆಯು
ತನ್ನ ಗಡಿಯಲಿ ತಳೆದು ನೂರು ಗುಡಿಯ

ಚಾಲುಕ್ಯ ಶಿಲ್ಪಕಲೆ ಮೊದಲು ಮೊಳೆಯಿತಿಲ್ಲಿ
ಮುದ್ದಿಸಿ ಮಲಪ್ರಭಾ ನದಿಯ ತಡಿಯ

ಐಹೊಳೆಯ ಪ್ರಥಮ ಕರ್ನಾಟಕ ವಿದ್ಯಾಪೀಠ
ನಮ್ಮ ಪೂರ್ವಜರ ಅರುಹಿಂಗೆ ಕುರುಹು
ಅರ್ಚಿಸಿದರೆಮ್ಮವರು ಆತ್ಮವಿದ್ಯೆಯನಿಲ್ಲಿ
ಅಂಗೈಯ ನೆಲ್ಲಿಯಾಗುವೊಲು ಅರುಹು

(ಭಾವತೀರ್ಥ)

'ಬನವಾಸಿ' ಎಂಬ ಕವಿತೆಯಲ್ಲಿ ಆದಿಕವಿ ಪಂಪ ಹಾಗೂ ವ್ಯೋಮಕಾಯಸಿದ್ಧ ಅಲ್ಲಮಪ್ರಭುಗಳನ್ನು ಸ್ಮರಿಸಿಕೊಂಡು ಬನವಾಸಿಯ ವೈಭವ ವರ್ಣಿಸುತ್ತಾರೆ –

ಏನ್ ಇನಿದಯ್ ಬನವಾಸಿಗೆ ಹೆಸರಿದು ನೈಜದಲಿ
ಜೇನ್ ಹನಿವುದು ಆ ಹೆಸರಿನ ನೆನಪಿಗೆ ಮನಸಿನಲಿ

....

ಬನವಾಸಿಯ ತನಿಗಂಪಿಗೆ ಸೊಂಪೇರಿತು ಪಂಪನ ಮನ
ಬನದಲ್ಲಿ ಮೆಲ್ಲೆಲರಾಡಲು ಕೊನರಿತು ಪ್ರಭುವಿನ ಜೀವನ

(ಭಾವತೀರ್ಥ)

'ಜೋಗದ ಯೋಗ' ಕವಿತೆಯಲ್ಲಿ ಜೋಗದ ಜಲಪಾತ ನೋಡುವ ಸೌಂದರ್ಯಯೋಗದಲ್ಲಿ ತನ್ಮಯರಾಗಿ ನಿಲ್ಲುತ್ತಾರೆ.

ನಾಟ್ಯಗೈವುದದ್ಭುತವು ಸೌಂದರ್ಯದ
ಜೊತೆಗೆ ಜೋಗದಲ್ಲಿ
ನಿಲ್ಲು ಎಲ್ಲವನು ಮರೆತು ಇಲ್ಲಿ ಸೌಂ –
ದರ್ಯ ಯೋಗದಲ್ಲಿ

(ಭಾವತೀರ್ಥ)

ಪ್ರಪಂಚದ ಅದ್ಭುತಗಳಲಿ ಒಂದಾಗಿರುವ ಕನ್ನಡನಾಡಿನ ವಿಜಾಪುರದ ವೈಭವವಾಗಿರುವ ಬೋಲಗುಮ್ಮಟವನ್ನು 'ಗೋಲಗುಮ್ಮಟ' ಎಂಬ ಕವಿತೆಯಲ್ಲಿ ಚಿತ್ರಿಸುತ್ತಾ – ಬಯಲು ಬ್ರಹ್ಮದರ್ಶನ ಮಾಡಿಸುತ್ತಾರೆ.

ಗೋಲಗುಮ್ಮಟ ಬೋಲ ಗುಮ್ಮಟ
ಗುಮ್ಮ ಗೂಢವಿದು ಗುಮ್ಮಟ
ಬಯಲ ಬೊಮ್ಮದ ಸುಳುಹ ದೋರಿಹುದು
ನೆಟ್ಟ ದಿಟ್ಟಿಗಿದು ಗುಮ್ಮಟ
....
ರೂಪ ಬ್ರಹ್ಮದಲಿ ಶಬ್ದ ಬ್ರಹ್ಮವದು
ತುಂಬಿಕೊಂಡಿಹುದು ಗುಮ್ಮಟ
ಬೆರಗಿನೊಡನೆ ನಿಬ್ಬೆರಗ ನೆಯ್ದಿಹುದು
ತನ್ನ ಗರ್ಭದಲಿ ಗುಮ್ಮಟ

(ಭಾವತೀರ್ಥ)

ಬೆಳಗಾವಿ ಜಿಲ್ಲೆಯ ಸೊಗಲ ಸೋಮೇಶ್ವರದ ಮಹಿಮೆಯನು ವರ್ಣಿಸುವ ಸುಂದರವಾದ ಕವಿತೆಯು **'ಜಲಕನ್ನಿಕೆ'** ಯಾಗಿದೆ.

ಸೊಗಲ ಸೋಮೇಶ್ವರನ ಮನೆಯ ಅಂಗಣದಲ್ಲಿ
ಜಲಕನ್ನಿಕೆಯು ಅದೋ ಕುಣಿಯುತಿಹಳು
ಅವಳ ಹೆಜ್ಜೆಯ ತಾಳಲಯಕೆ ಜೀವನವೆಲ್ಲ
ಹೊಮ್ಮಿ ಹೊಗರೇರುತಿದೆ ಹಗಲು ಇರುಳು

(ಭಾವತೀರ್ಥ)

ಇದೇ ರೀತಿಯಲ್ಲಿ ಗೋಕರ್ಣ, ಬನಶಂಕರಿ, ಬೇಲೂರ, ಮಾನಸ ಸರೋವರ, ಕೂಡಲಸಂಗಮ, ಚೆಲುವು ಒಲವು ಕವಿತೆಗಳು ಕವಿಯ ಭಾವಸಂಪತ್ತನ್ನು ಪರಿಚಯಿಸುತ್ತವೆ.

೩. **ಗೀತಗೌರವ :** ಎಂಬ ಕವನ ಸಂಕಲನವು ರಾಜ್ಯ ಸಾಹಿತ್ಯ ಅಕಾಡೆಮಿ ಪುರಸ್ಕಾರ ಪಡೆದ ಕವಿತಾಸಂಗ್ರಹವಾಗಿದೆ. ಇದರಲ್ಲಿ ೧೮ ಕವನಗಳಿವೆ. ಇದರಲ್ಲಿ ಸಿದ್ಧಾರ್ಥ, ಬುದ್ಧ – ಯಶೋಧರೆ, ಸಹಸ್ರಬನ, ದಿಟದದಾರಿ, ನೀಲಾಂಬಿಕೆ, ಕಾಯಕದೀಕ್ಷೆ, ದಾನಚಿಂತಾಮಣಿ, ಪರಮಶಿಷ್ಯೆ, ನೆಹರೂ, ದಿವ್ಯಜ್ಯೋತಿ ಮುಂತಾದ ಕವಿತೆಗಳು ಮಹಾನ್ ಚೇತನಗಳನ್ನು ಸ್ಮರಿಸುವ ಕಥನ ಕವನಗಳಾಗಿವೆ.

ರಾಷ್ಟ್ರಪಿತ ಮಹಾತ್ಮಾಗಾಂಧಿಜಿಯವರು ಹಂತಕನ ಗುಂಡಿಗೆ ಬಲಿಯಾದಾಗ, ಮಹಾತ್ಮರ ಅಗಲಿಕೆಯ ನೋವನ್ನು ಅನುಭವಿಸಿದ ಕವಿಹೃದಯ ಆ ಭಾವನೆಗಳಿಗೆ ರೂಪುಕೊಟ್ಟು ಬರೆದ ಕವಿತೆ 'ದಿವ್ಯಜ್ಯೋತಿ' ತುಂಬಾ ಹೃದಯಂಗಮವಾಗಿ ಮೂಡುಬಂದಿದೆ.

ದಿವ್ಯಜ್ಯೋತಿ

ತಿಳಿ ನೀಲದಲ್ಲಿ ತಾ ನೀಲವಾಗಿ ಅವ ಹೋದ ದೂರ ದೂರ
ಬೆಳಗಿಹುದು ಇಲ್ಲಿ ಅವ ಬಿಟ್ಟ ಬೆಳಕು, ಇನ್ನೊಮ್ಮೆ ಏಕೆ ಬಾರ?
ಅಂದು ಸಂಜೆ ಪ್ರಾರ್ಥನೆಗೆ ದೇವಮಂದಿರದ ದಾರಿಯಲ್ಲಿ
ಆಚೆ ಈಚೆ ಮೊಮ್ಮಕ್ಕಳಿಬ್ಬರಲಿ ಮೈಯ ಭಾರ ಚೆಲ್ಲಿ
ಜಗದ ಕರುಣೆ ನಡೆವಂತೆ ನಡೆದು ಮಂದಿರದ ಪೀಠವೇರಿ
ನಿಂದನೆಲ್ಲೊ ! ಜಡವುಳಿದು ಜೀವವೊಂದಾಯ್ತು ದೇವನಲ್ಲಿ

ಎಸೆದ ಗುಂಡಿಗಾ ಕುಸಿದ ದೇಹದಲಿ ವಿಮಲ ರಕ್ತ ಚೆಲ್ಲಿ
ಮೀಯಿಸಿತ್ತು ಈ ಜಗದ ಮನವನೇ ಶೋಕ ಜಲಧಿಯಲ್ಲಿ
ಮುಗಿದ ಕೈಯು ಮುಗಿದಂತೆ ಇತ್ತು, ನೆಲೆಸಿತ್ತು ಕ್ಷಮೆಯು ಮೊಗದಿ
ಎದೆಯೊಳೆಂಥ ತಿಳಿಭಾವವಿತ್ತು! ಅದನಾವ ಬಲ್ಲ ಜಗದಿ!

ಹೋದ ಹೋದನವ ತ್ಯಾಗಜೀವನದ ತುತ್ತ ತುದಿಯನೇರಿ
ಏರಿ ಏರಿದೊಲು ಅಂತರಂಗದೈಸಿರಿಯ ಜಗಕೆ ತೂರಿ
ಸತ್ಯ ಪ್ರೇಮಗಳ ಸತ್ವವನ್ನೇ ಕಣ್ಣೆದುರು ಎತ್ತಿ ತೋರಿ
ಬೇರೆ ಲೋಕದನುಭಾವ ಬೀರಿ ಅವ ಹೋದನಾವ ದಾರಿ?

ಎನಿತು ಸರಳ ನುಡಿ, ಎಷ್ಟು ಸಹಜ ನಡೆ, ಮನದ ಮಹತಿಯೇನು!
ಅವನ ಎದೆಯ ಉನ್ನತಿಯ ನಿಲುಕುವುದು ಯಾವ ಗಿರಿಯ ಸಾನು?
ಇಹುದೆ ಅವನ ಕರುಣೆಯನು ಧರೆಗೆ ಕರೆವಂಥ ಕಾಮಧೇನು!
ಅವನು ಗೈದ ಲೀಲೆಯಲಿ ಲಯಿಸಿತೆಂಥವರ ನಾನು ನಾನು!

ತಿಳಿದಿಹುದು ಚಿತ್ತ, ಹರಿದಿಹುದು ನೋಟ ಮೇಲಕ್ಕೆ ಬಾನಿನೆಡೆಗೆ
ಆ ಜಾಡ ಹಿಡಿದು ಇಳಿದಂತೆ ಇಹುದು ಬೆಳಕೊಂದು ಕೆಳಗೆ ಇಳೆಗೆ

'ಏನೆಷ್ಟು ಭ್ರಾಂತಿ? ಕಾಣದೆಯೆ ಜ್ಯೋತಿ?"
ಬೆಳಕ ನಂಬಿ ನಿಂದಿಹನು ಎದೆ ತೆರೆದು ನಾಡ ಕರೆಗೆ

(ಗೀತಗೌರವ)

'ದಾನಚಿಂತಾಮಣಿ' ಎಂಬ ಕವಿತೆಯಲ್ಲಿ ಕವಿಯು ಕರುನಾಡ ಕಂದರಿಗೆ ದಾನಚಿಂತಾಮಣಿಯನ್ನು ನಿರಂತರ ಸ್ಮರಿಸಬೇಕೆಂದು ತಿಳಿಸುತ್ತಾರೆ. ಮಹಾಕವಿ ರನ್ನನಿಗೆ ಆಶ್ರಯದಾತೆಯಾದ ಮಹಾತಾಯಿಯು ದಾನಚಿಂತಾಮಣಿಯು. ಈ ತಾಯಿಯನ್ನು ನೆನೆಸಬೇಕೆಂದು ಕವಿಯು ಹೇಳುತ್ತಾರೆ.

ಕರುನಾಡ ಕಂದನೆ ನೆನಪಿಡು
ಅತ್ತಿಮಬ್ಬೆಯು ಮಾನ್ಯ ಮಹಿಳಾಮಣಿ
ಚಿನ್ನದ ಭೂಮಿಗೆ ರನ್ನ ಕವಿಯನು ನೀಡಿ
ಧನ್ಯಳಾದಳು ದಾನಚಿಂತಾಮಣಿ.....

(ಗೀತಗೌರವ)

ಗೌತಮಬುದ್ಧನು ಪರಮ ದಯಾಳು. ಆತನ ದಯಾಪೂರ್ಣ ಹೃದಯವಂತಿಕೆಯು ಈ ಕಥನ ಕವನದಲ್ಲಿ ಚಿತ್ರಿತವಾಗಿದೆ. ಕೊಲ್ಲುವವನಿಗಿಂತ ಜೀವ ಕಾಪಾಡುವವನೇ ಶ್ರೇಷ್ಠ ಎಂಬುದು ಸಿದ್ಧಾರ್ಥ ಕವನದಲ್ಲಿ ತೋರಿಸಿದ್ದಾರೆ –

ಸಿದ್ಧಾರ್ಥನು ರಾಜಪುತ್ರ
ಬಹು ದಯಾಳುವಾತನು
ಹೂವಿನಂತೆ ಅವನ ಹೃದಯ
ಆದನವನೆ ಬುದ್ಧನು.....

(ಗೀತಗೌರವ)

ಬುದ್ಧ – ಯಶೋಧರೆ ಎಂಬ ಕವಿತೆಯಲ್ಲಿ ಬುದ್ಧನ ಪತ್ನಿ ಯಶೋಧರೆಯ ಮಹಿಮೆಯನ್ನು ವರ್ಣಿಸಿದ್ದಾರೆ –

ನೀರು ಎರೆದಳು ಬೋಧಿ ವೃಕ್ಷಕೆ
ಬುದ್ಧ ಪತ್ನಿ ಯಶೋಧರೆ

ಅವಳ ನಿರ್ಮಲ ಮನದ ಅಮೃತಫಲ
ಸವಿದು ತಣಿಯಿತು ಈ ಧರೆ ....

(ಗೀತಗೌರವ)

ದಾಸರಲ್ಲಿಯೇ ಶ್ರೇಷ್ಠರು, ಕುಲ – ಜಾತಿ ಕಿತ್ತೆಸೆದ, ವಿಡಂಬನೆಗೈದ ಕನಕದಾಸರು ಶ್ರೇಷ್ಠ ಶಿಷ್ಯರೆಂಬುದನ್ನು "ಪರಮ ಶಿಷ್ಯ" (ಕನಕ) ಎಂಬ ಕವನದಲ್ಲಿ ಚಿತ್ರಿಸಿದ್ದಾರೆ –

"ಯಾರು ಹೋಗಲು ಬಹುದು ನಿಮ್ಮೊಳು
ಶ್ರೀಹರಿಯ ವೈಕುಂಠಕೆ?
'ನಾನು ಹೋದರೆ ಹೋಗಬಹುದು
ಗುರುವೆ ಶ್ರೀ ಹರಿಯ ಭವನಕೆ"

(ಗೀತಗೌರವ)

'ದಿಟದ ದಾರಿ' ಎಂಬ ಕವಿತೆಯು ವಿಶ್ವಗುರು ಬಸವಣ್ಣನವರು ಕೂಡಲಸಂಗಮದಿಂದ ಕಲ್ಯಾಣಕ್ಕೆ ಬಂದು ಗೈದ ಮಹಾಸಾಧನೆ, ಶರಣರ ಕ್ರಾಂತಿಯ ಮಾರ್ಗವನ್ನು ಚಿತ್ರಿಸುತ್ತದೆ –

ಬಸವಣ್ಣ ದಣ್ಣನಾಯಕರ ಮನೆಯು
ತಾನಾಯ್ತು ಮಹದ ಮನೆಯು
ನಿತ್ಯವೂ ಪ್ರಮಥ ತೃಪ್ತಿಯಲಿ ತಣಿದಮನ
ಎಂಥ ಸವಿಯ ಕೆನೆಯು!
ಹೋಗೆನಲು ತಂದೆ, ಓ ಎಂದು ಹೋಗಿ
ಕಲ್ಯಾಣದಲಿ ನಿಂದು
ಕಾಯಕವ ಗೈದ ಶಿವನಾಜ್ಞೆಯಂತೆ
ಬಂದುದೆ ಪ್ರಸಾದವೆಂದು
ಕಲ್ಯಾಣ ಪುಣ್ಯಾದಾಗರವಾಯ್ತು
ಶಿವಶರಣರಾಗಮನದಿ
ಅನುಭವವು ಪರಮನನುಭಾವವಾಗಿ
ನುಡಿಯಿತ್ತು ವಚನದಲ್ಲಿ
ತುಂಬಿತ್ತು ಸಂತಸವನು ತರಂಗ
ಸಾಹಿತ್ಯದೋಜೆಯಿಂದ

(ಗೀತಗೌರವ)

೪. **ಕರಿಕೆ ಕಣಗಿಲು** : ಇದು ಏಳು ಗುಂಪುಗಳಲ್ಲಿ ಮೇಳಯಿಸಲ್ಪಟ್ಟ ೧೦೧ ಕವಿತೆಗಳ ಸಂಕಲನವಾಗಿದೆ. ಇದರಲ್ಲಿ ವೈವಿಧ್ಯಮಯವಾದ ಕವಿತೆಗಳಿವೆ. 'ಕರಿಕೆ' ಎಂಬುದು ಡಾ॥ ಕರ್ಕಿಯವರ ಮನೆತನದ ಪ್ರತೀಕವಾಗಿ, 'ಕಣಗಿಲು' ಎಂಬುದು ಸೋದರಮಾವ ಈಶ್ವರಪ್ಪನವರ ಮನೆತನದ ಪ್ರತೀಕವಾಗಿದೆ. ಈ ಎರಡೂ ಮನೆತನಗಳ ನಡುವೆ ಮಧುರವಾದ ಅವಿನಾಭಾವ ಸಂಬಂಧವಿದೆಯೆಂಬುದನ್ನು 'ಕರಿಕೆ' , 'ಕಣಗಿಲು'ಗಳಿಗಿರುವ ಸಂಬಂಧದ ಮೂಲಕ ಈ ಕವಿತೆಯಲ್ಲಿ ಚಿತ್ರಿಸಿದ್ದಾರೆ –

ಹರಿವ ತೊರೆಯ ಮಳಲ ತೀರ
ದಲ್ಲಿ ಹೊಳೆದ ಎಸಳು ಕರಿಕೆ......
ಅಲ್ಲಿಯೇ ಆ ತೀರದೊಳೇ
ಎಳೆಯತನದ ತಿಳಿಬಗೆಯೊಳೆ
ಎತ್ತಿ ಕುಣಿಸಿ ಹೂಗೊನೆ ಗೊನೆ
ಚೆಂಗಣಿಗಿಲೆ ನಕ್ಕ ನೆನಪು.......

ಮರಳಿ ಮರಳಿ ಕರಿಕೆ ನೆಲಕೆ
ಹಾಸುವುದಲ ಹೊಸ ಹಸಿರ
ಮತ್ತೆ ಮತ್ತೆ ಚೆಂಗಣಗಿಲೆ
ಸೂಸುವುದಲ ರತ್ನ ಹಾಸ
ಒಂದು ಬೇರು
ಒಂದು ಹೂವು
ಒಂದೇ ಚಿತ್ತದ ವಿಲಾಸ!
ಈ ನೆಲದೊಳು ಬೆಳೆದು ಬಂದ
ಈ ನೈಜದ ಮೈತ್ರಿ!

'ಈ ಕುಂಬಳದ ಬಳ್ಳಿ' ಎಂಬ ಕವಿತೆಯ ಮೂಲಕ ಹಳ್ಳಿಯ ಜನರ ಬದುಕಿನಲ್ಲಿ ಅದರ ಮಹತಿಯನ್ನು ಅರುಹುತ್ತಾರೆ.

ಈ ಕುಂಬಳದ ಬಳ್ಳಿ
ಇನಿತು ದಿನಗಳವರೆಗೆ

ಸುತ್ತಿಕೊಂಡಾ ಸುರುಳಿ
ಬಿಚ್ಚುತಿದೆ ಮರಳಿ .....
....
ಹಳ್ಳಿಗರಿಗೀ ಬಳ್ಳಿ
ಹಿತ್ತಲದ ಬಳ್ಳಿ
ಒಲಿದವರಿಗೀ ಬಳ್ಳಿ
ಹತ್ತಿರದ ಬಳ್ಳಿ
ಬಡಜನಕೆ ಇದು, ಇದುವೇ
ಬಂಗಾರ ಬಳ್ಳಿ
ಇದರ ನೇಹದ ತಿರುಳ
ಬಲ್ಲವನೆ ಬಲ್ಲ
ಗಾರಿಗೆಯ ತಿಂದಾಗ
ಇದರ ರುಚಿ ನೋಡ ....

(ಕರಿಕೆ ಕಣಗಿಲು)

'ಜೋಳದ ಬೆಳೆ' ಎಂಬ ಕವಿತೆಯಲ್ಲಿ ಬೆಳವಲ ಸೀಮೆಯ ಚಿನ್ನದ ಬೆಳೆಯ ಪರಿಚಯ ಮಾಡಿಕೊಡುತ್ತಾರೆ –

ಜೋಳದ ಬೆಳೆ
ಇದು ಜೋಳದ ಬೆಳೆ ಬೆಳಗಿದೆ ಬೆಳುವಲ
ಸೀಮೆಯ ಚೆಲುವನ್ನೆ
ರನ್ನನ ನಾಡಿನೊಳಿದು ಚಿನ್ನದ ಬೆಳೆ
ಬೆಳಸಿದೆ ಒಲವನ್ನೆ
....
ಜೋಳದ ರಾಶಿಯು ನಡೆದಿರೆ ಈ ನೆಲ –
ಕಳಿವುದು ಸುವಿಲಾಸ
ಒಕ್ಕಲು ಮಕ್ಕಳು ಹಾಡುವ ಹಾಡಿಗೆ
ಉಕ್ಕಿ ಬಹುದು ಹರುಷ

(ಕರಿಕೆ ಕಣಗಿಲು)

ಸ್ವಾತಂತ್ರ್ಯ ಸಮರದ ಬೆಳ್ಳಿಚುಕ್ಕಿಯಾಗಿ, ಭಾರತ ಸ್ವಾತಂತ್ರ್ಯ ಸಂಗ್ರಾಮದ ಕಹಳೆಯೂದಿ ಬ್ರಿಟೀಶರೊಂದಿಗೆ ಹೋರಾಡಿದ ಕೆಚ್ಚೆದೆಯ ಮಹಾಧೀರೆ, ಚೆನ್ನಮ್ಮರಾಣಿಯ ಶೌರ್ಯವನ್ನು **'ಕಿತ್ತೂರಿನ ರಾಣಿ'** ಎಂಬ ಕವಿತೆಯಲ್ಲಿ ತಿಳಿಸುತ್ತಾರೆ.

ಏರಿದಳದೊ ತೇಜಿಯನ್ನು ಕಿತ್ತೂರಿನ ರಾಣಿ
ಆಡಿತು ರಣರಂಗದಿ ಅವಳಭಿಮಾನದ ವಾಣಿ
ಹೊಸ ಹುಮ್ಮಸ ಸಂಚರಿಸಿತು ನಾಡಿ ನಾಡಿಯಲಿ
ಮೀಯುತ ರವಿ ಕಿರಣದಲಿ
ಮಿಳಿಯುತ ಸುಳಿಗಾಳಿಯಲಿ
ನುಡಿಯಿತು ಬಾವುಟ ಬಾನಲಿ
ಬಂದಳದೋ ಕುದುರೆಯೇರಿ ವೀರ ಚೆನ್ನಮ್ಮಾಜಿ!
ಮನದ ಮಿಂಚು ಮಾರ್ಪೊಳೆದಿರೆ ಹಿಡಿದಾ ಖಡ್ಗದಲಿ
ಕಲಿತನವೇ ಕಳೆ ಬೆಳಗಿರೆ ಮುಖದಾ ಮುದ್ರೆಯಲಿ
ಮುಂಚೂಣಿಗೆ ನಿಂದಳದೋ ರಾಣಿ ತೇಜಿಯೇರಿ
ರಣದಿ ರಾಣಿಗಾರು ಸರಿ ?
ಮೈದಳೆದ ವೀರಶ್ರೀ!
ಹಿಂದೆ ಸರಿ, ಸರಿ ವೈರಿ
ನಿನ್ನ ಶೌರ್ಯ ಸಾಲದಿಲ್ಲಿ ಬಂದಳು ಕೇಸರಿಣಿ!
(ಕರಿಕೆ ಕಣಗಿಲು)

'ಯಾರೆ ನಗಲಿ' ಎಂಬ ಕವಿತೆಯಲ್ಲಿ ಮಾನವನು ಹೇಗೆ ಬದುಕು ಮಾಡಬೇಕು ಎಂಬುದನ್ನು ತಿಳಿಸುತ್ತಾರೆ –

ಯಾರೆ ನಗಲಿ
ತೇಲಿ ಬರಲಿ
ಎಲ್ಲರೆಡೆಗೆ ಸವಿದನಿ
ತ್ವೇಷ ರೋಷ
ಎಲ್ಲ ದೋಷ
ಕರಗುವಂತೆ ಕ್ಷಣದಲಿ

ನಂಬಿಗೆಯನು ತುಂಬು ಎದೆಗೆ
ಇಂಬು ಅದುವೆ ಬಾಳಿಗೆ
ತಿಳಿದ ಎದೆಯ ಬೆಳಕು ನಮಗೆ
ಶುಭವು ಸಕಲ ಲೋಕಕೆ...............

(ಕರಿಕೆ ಕಣಗಿಲು)

ಅಜ್ಞಾನ ಕತ್ತಲೆಯಲ್ಲಿ, ಸಂಕುಚಿತ ಮನಸ್ಸಿನಲಿ ಬದುಕುವವರಿಗೆ, ಚಿತ್ತದ ಕದವತೆರೆದು ಜ್ಞಾನದ 'ಬೆಳಕು ಬರಲಿ' ಎಂದು ಈ ಕವಿತೆಯಲ್ಲಿ ತಿಳಿಸುತ್ತಾರೆ –

ಕದವ ತೆರೆ ಬೆಳಕು ಬರಲಿ
ಓ ಚಿತ್ತ
ತೆರೆ ಕದವ ಬೆಳಕು ಬರಲಿ
ಬರಿ ನಿನ್ನ ಮೈ ಸುತ್ತು
ತೊರೆದು ಬಾ ಕವಿಗಳ ನೆರಳ
ಬಾ ಇತ್ತ
ಕದ ತೆರೆದು ಬೆಳಕಿನತ್ತ ....

(ಕರಿಕೆ ಕಣಗಿಲು)

೫. ನಮನ : ಇದೊಂದು ಭಕ್ತಿ ಪ್ರಧಾನವಾದ ಪ್ರಾರ್ಥನಾಗೀತಗಳ ಕವನ ಸಂಕಲನ. ಇದರಲ್ಲಿ ೪೦ ಕವಿತೆಗಳಿವೆ. ಈ ಸಂಕಲನದಲ್ಲಿ ದೇವಭಕ್ತಿ, ದೇಶಭಕ್ತಿ, ನಿಸರ್ಗ ಭಕ್ತಿ, ಶಿವಶರಣರ ಭಕ್ತಿ ಮುಂತಾದ ಪ್ರಾರ್ಥನಾ ಪದಗಳಿವೆ.

'ನೈಜ ನಮನ' ಎಂಬ ಕವಿತೆಯು ತುಂಬಾ ಜನಪ್ರಿಯವಾಗಿದ್ದು, ಸ್ವಚ್ಛ ಮನಸ್ಸಿನಿಂದ ಮಾಡುವ ಕಾಯಕವೇ ದೇವರ ನಿಜವಾದ ಪ್ರಾರ್ಥನೆ ಎಂದು ತಿಳಿಸುತ್ತಾರೆ.

ಹಸನು ಮನದಿ ಗೈವ ದುಡಿಮೆ
ದಿನದ ಸಹಜ ಪ್ರಾರ್ಥನೆ
ಎದೆಯ ಕಿರಣ ಪ್ರೇರಿಸಿರುವ
ಕ್ರಿಯೆಯೆ ಸಹಜ ಕೀರ್ತನೆ

ಕರ್ತವ್ಯದ ಮುಖದೊಳಿರಲಿ
ಸುಪ್ರಸನ್ನ ಚಿತ್ತ
ಬಂದ ಬದುಕು ಅಂದವಹುದು
ಬರಮಾಡುತ್ತ ಇತ್ತ

ಕಾಯಕ ಕೈಲಾಸವೆಂದು
ನುಡಿದ ನೈಜ ಭಕ್ತ
ಅದನು ನಂಬಿ ನಡೆದವರಿಗೆ
ನಿಜದ ಬದುಕು ನಿತ್ಯ

ದಿನದ ಕಾಯಕದ ಅನುಭವ
ಮನಕೆ ತರುವುದು ಮುದ
ಅದುವೆ ಶಿವನ ಕರುಣೆ, ಅದುವೆ
ಪರಮ ಸುಪ್ರಸಾದ

ಅಂದಂದಿನ ನಂಬಿಗೆಯಲಿ
ಸ್ನೇಹ ಬೆರೆದ ಕಾರ್ಯ
ನಂದಾದೀವಿಗೆ ದೇವಗೆ
ನೈಜ ನಮನ ನಮನ

(ನಮನ)

ದೇವರೇ, ನಿನ್ನ ನೆನಹಿನಲ್ಲಿ ಮನವ ಅರಳಿಸು ಬಾಳಬೆಳಗಿಸು ಎಂದು **'ಮನವ ಮಧುರಿಸು'** ಎಂಬ ಕವಿತೆಯಲ್ಲಿ ಪ್ರಾರ್ಥಿಸುತ್ತಾರೆ –

ದೇವ ನಿನ್ನ ನೆನಹಿನಲ್ಲಿ
ಮನವ ಅರಳಿಸು
ದಿನವು
ಬಾಳ ಬೆಳಗಿಸು

ಎದೆಯ ಎವೆಯ ಎವೆಯ ತೆರೆದು
ಕಣ್ಣಿನೊಳಗೆ ಕಾಂತಿ ಸುರಿದು

ಭಾವದಲ್ಲಿ ರೂಪ ಬರೆದು
ಒಲವ ಅರಳಿಸು, ದೇವ
ಬಾಳ ಬೆಳಗಿಸು

(ನಮನ)

'ಓ ಪ್ರಕೃತಿ' ಎಂಬ ಕವಿತೆಯಲ್ಲಿ ಪ್ರಕೃತಿ ಮಾತೆಯನ್ನು ಕುರಿತು ಪ್ರಾರ್ಥಿಸುವ ರೀತಿಯು ಬೆರಗುಗೊಳಿಸುತ್ತದೆ –

ಓ ಪ್ರಕೃತಿ ನೀನೆಮ್ಮ ಪರಿಸರದಿ ಸುಳಿಸುಳಿದು
ಮನವರಳಿಸು ತಾಯೆ, ನಿನಗೆ ನಮನ
ನಿನ್ನ ಸಿರಿಗೈಯಿಂದ ತೆರೆ ಎದೆಯ ಬಾಗಿಲನು
ಲೇಸಿನೆಡೆ ನಮ್ಮ ಗಮನ

(ನಮನ)

'ಸರ್ವಾಂತರ್ಯಾಮಿ' ಎಂಬ ಪ್ರಾರ್ಥನಾ ಕವಿತೆಯು ಹೃಷಿಕೇಶದ ಪೂಜ್ಯ ಡಾ॥ ಶಿವಾನಂದ ಸ್ವಾಮಿಗಳವರು ಬರೆದ ಇಂಗ್ಲೀಷ ಕವಿತೆಯಾಗಿದೆ. ಇದನ್ನು ಡಾ॥ ಕರ್ಕಿಯವರು ಕನ್ನಡಕ್ಕೆ ಅನುವಾದಿಸಿದ್ದು, ಇತ್ತೀಚೆಗೆ ಕುಂಬಳೂರು ಗುರುಕುಲದ ಶ್ರೀ ಶಿವಾನಂದ ಗುರೂಜಿಯವರು ನನಗೆ ಬರೆದು ಕಳಿಸಿದ್ದು, ಇಲ್ಲಿ ಪ್ರಕಟಿಸಲಾಗಿದೆ. ಇದು ಡಾ॥ ಕರ್ಕಿಯವರ ಅನುವಾದ ಕಲೆಯ ಪ್ರೌಢಿಮೆಯನ್ನು ತೋರಿಸುತ್ತದೆ.

ದಯಾಪರನೆ ಪ್ರೇಮಮಯನೆ
ಪರಮೇಶ್ವರ ಪಾವನ
ನಿನಗೆ ದೀರ್ಘದಂಡ ನಮನ ನಿನಗನಂತ ವಂದನಾ ॥ ಪ ॥

ಸರ್ವವ್ಯಾಪಿ ಸರ್ವಶಕ್ತ ಸರ್ವಜ್ಞಾನಪೂರ್ಣನೂ
ನೀನು ಸಚ್ಚಿದಾನಂದನು ಸರ್ವಾಂತರ್ಯಾಮಿಯು
ನಿನಗೆ ದೀರ್ಘದಂಡ ನಮನ ನಿನಗನಂತ ವಂದನಾ ॥೧॥

ಪ್ರಜ್ಞೆಯುಳ್ಳ ಹೃದಯವನ್ನು ಸಮತೆಯುಳ್ಳ ದೃಷ್ಟಿಯನ್ನು
ಸಮತೂಕದ ಚಿತ್ತವಾ।
ಕರುಣಿಸೆಮಗೆ ಶ್ರದ್ಧೆಭಕ್ತಿ ಪೂರ್ಣವಾದ ಜ್ಞಾನವ
ನಿನಗೆ ದೀರ್ಘದಂಡ ನಮನ ನಿನಗನಂತ ವಂದನಾ ॥೨॥

ಸಕಲ ಪ್ರಲೋಭನೆಗಳನ್ನು ಸಲೆ ಎದುರಿಪ ಧೈರ್ಯವ
ಮನವ ಅಂಕೆಯಲ್ಲಿ ಇಡುವ ಆಧ್ಯಾತ್ಮಿಕ ಸ್ಥೈರ್ಯವ
ದಯಪಾಲಿಸು ದಯಾಪೂರ್ಣ ನಿನಗನಂತ ವಂದನಾ ॥೩॥

ಅಹಂಕಾರ ಕಾಮಲೋಭ ರಾಗದ್ವೇಷವೆಲ್ಲವ
ದೂರ ಮಾಡಿ ತುಂಬುಮನದಿ ದೈವೀ ಸದ್ಭಾವವ
ನಿನಗೆ ದೀರ್ಘದಂಡ ನಮನ ನಿನಗನಂತ ವಂದನಾ ॥೪॥

ಸಕಲನಾಮ ರೂಪಗಳಲಿ ತೋರು ನಮಗೆ ನಿನ್ನನೆ
ಎಲ್ಲ ನಾಮರೂಪಗಳಲಿ ಸೇವಿಸುವೊಲು ನಿನ್ನನೆ
ದಯಪಾಲಿಸು ದಯಾ ಪೂರ್ಣ ನಿನಗನಂತ ವಂದನಾ ॥೫॥

ಸದಾ ನಿನ್ನ ನೆನೆಯುವಂಥ ಮನವು ನಮ್ಮದಾಗಲಿ
ನಿನ್ನ ಮಹಿಮೆ ಸ್ತುತಿಸುವಂಥ ನುಡಿಯು ತುಟಿಯೊಳಾಡಲಿ
ನಿರಂತರವು ನಿನ್ನಲ್ಲಿಯೆ ನಮ್ಮ ಚಿತ್ತ ನಿಲ್ಲಲಿ ॥೬॥

ದಯಾಪರನೆ ಪ್ರೇಮ ಮಯನೆ – ಪರಮೋನ್ನತ ಚೇತನ
ನಿನಗೆ ದೀರ್ಘದಂಡ ನಮನ ನಿನಗನಂತ ವಂದನಾ ॥ಅ.ಪ.॥

೬. ಬಣ್ಣದ ಚೆಂಡು : ಇದು ೧೧ ಪದ್ಯಗಳ ಮಕ್ಕಳ ಕವನಗಳ ಸಂಕಲನವಾಗಿದೆ. ಶಿಕ್ಷಣ ತಜ್ಞರಾದ ಡಾ ॥ ಕರ್ಕಿಯವರು ಮಕ್ಕಳ ಮನಸ್ಸನ್ನು ಅರಿತವರಾಗಿದ್ದರು. ಮಕ್ಕಳು ಆಡುವ ಬಣ್ಣ ಬಣ್ಣದ ರಬ್ಬರ ಚೆಂಡಿನ ವರ್ಣನೆ ಮಾಡುತ್ತಾ – 'ಬಣ್ಣದ ಚೆಂಡು' ಕವಿತೆಯಲ್ಲಿ ಮನೋಜ್ಞವಾದ ಚಿತ್ರಣ ಕೊಡುತ್ತಾರೆ.

ಅಹಹಾ ರಬ್ಬರ ಚೆಂಡು
ಗಾಳಿಯನುಂಡು
ಪುಟಿಯುವ ಚೆಂಡು
ಕಾಣಿಸುವುದು ಬಲು ದುಂಡು
ಅಹಹಾ ರಬ್ಬರ ಚೆಂಡು
ಅಹಹಾ ಬಣ್ಣದ ಚೆಂಡು!
ಪುಟಿಯಲು ಕಂಡು

ಹುಡುಗರ ದಂಡು
ನೆರೆವುದು ಹಿಂಡು ಹಿಂಡು
ಕರೆವುದು ಬಣ್ಣದ ಚೆಂಡು!
ತ್ಯೆ ತಕ ಎಂದು
ಕುಣಿ ಕುಣಿ ಎಂದು
ನಮ್ಮನು ಕುಣಿಸುವ ಚೆಂಡು
ಅಹಹಾ ರಬ್ಬರ ಚೆಂಡು
ಆಟಕೆ ಎಳೆಯುವ ಚೆಂಡು!
ಅಮ್ಮನು ಕರೆದರೂ
ಅಪ್ಪನು ಕರೆದರೂ
ಹೋಗಲು ಬಿಡದೀ ಚೆಂಡು
ಅಹಹಾ ರಬ್ಬರ ಚೆಂಡು
ಮೊದಲೇ ಗಾಳಿ ಚೆಂಡು
ಕೊನೆಯಲಿ ಒಂದು
ದಿನ ಪುಸ್ಸೆಂದು
ಆಟವ ಮುಗಿಸುವ ಚೆಂಡು
ಅಹಹಾ ರಬ್ಬರ ಚೆಂಡು

(ಬಣ್ಣದ ಚೆಂಡು)

'ಬುರು ಬುರು ಬಸವಣ್ಣ' ಎಂಬ ಕವಿತೆಯು ಗ್ರಾಮೀಣ ಭಾಗದಲ್ಲಿ ಸಂಚರಿಸುವ 'ಕೌಲೆತ್ತು'ಗಳೊಂದಿಗೆ ಬರುವ ಜಾನಪದ ಕಲಾವಿದರ ಚಿತ್ರಣ ಕೊಡುತ್ತದೆ.

ಬಂದಿಹನಣ್ಣಾ ಬಂದಿಹನಣ್ಣಾ
ಚೆಂದದ ಬುರು ಬುರು ಬಸವಣ್ಣ
ಮೈಯಲಿ ಜೂಲು ಅಹಹಾ ಡೌಲು
ಹೊಂಬಣ್ಣದ ಕೊಂಬಣಸಣ್ಣ
ಕೊರಳಿನ ಗೆಜ್ಜೆ ಉಲಿಯಲು ಹೆಜ್ಜೆ
ಹಾಕುತ ನಡೆವನು ಬಸವಣ್ಣ

ಬಾರಿಸೆ ಡೋಲು ಹಾಕುವ ಗೋಣು
ಡೋಲಿನ ತಾಳಕೆ ಬಸವಣ್ಣ
ಹೌದೆಂದರು ಸೈ ಅಲ್ಲೆಂದರು ಸೈ
ಕೌಲನು ಕೊಡುವನು ಬಸವಣ್ಣ
ಹುಡುಗರಿಗಾಗಿ ಸಡಗರವಾಗಿ
ಬರುವನು ಬುರು ಬುರು ಬಸವಣ್ಣ
ಮೈ ಮುಟ್ಟಿದರು ತಲೆ ತಟ್ಟಿದರು
ಸುಮ್ಮನೆ ಇರುವನು ಬಸವಣ್ಣ
ನೀ ಕೊಡು ಬಿಲ್ಲಿ ತಡವೇನಲ್ಲಿ ?
ಮುಜರೆ ಮಾಡುವನು ಬಸವಣ್ಣ
ಬಿಡುವನು ಈ ಮನೆ ಹಿಡಿವನು ಆ ಮನೆ
ಮನೆ ಮನೆ ತಿರುಗುವ ಬಸವಣ್ಣ
ಎಲ್ಲರ ಮುಂದೂ ಒಂದೇ ಒಂದು
ಆಟವ ಆಡುವ ಬಸವಣ್ಣ
ಕೊಟ್ಟರೆ ಹಿಗ್ಗನು, ಬಿಟ್ಟರೆ ತಗ್ಗನು
ಮುಂದಕೆ ಸಾಗುವ ಬಸವಣ್ಣ

(ಬಣ್ಣದ ಚೆಂಡು)

೭. ತನನ ತೋಂ : ಇದು ೧೬ ಮಕ್ಕಳ ಕವಿತೆಗಳ ಸಂಕಲನವಾಗಿದೆ. ಇಲ್ಲಿ ಮಕ್ಕಳು ಆನಂದಿಂದ ಹಾಡುತ್ತಾ – ನಲಿಯುತ್ತಾ ಹಾಡುವ ಪದ್ಯಗಳಿವೆ 'ತನನ ತೋಂ' ಎಂಬುದು ಮೊದಲ ಕವಿತೆಯಾಗಿದ್ದು, ಕನ್ನಡದ ಅಭಿಮಾನ ಹೆಚ್ಚಿಸುತ್ತದೆ.

೧

ನಾಡ ಬೆಡಗ
ಹಾಡು ಹುಡುಗ
ತನನ ತನನ ತೋಂ
ಕನ್ನಡದಲಿ
ನುಡಿಯಾಡಲಿ
ತನನ ತನನ ತೋಂ

೨

ಹಿಗ್ಗು – ಹೊಳೆ
ಹಾಡಿನೊಳೆ
ಹರಿಯಲಿ ತನನ ತೋಂ
ಕೇಳಿ ಅದಂ
ಜನದ ಮನಂ
ನಲಿಯಲಿ ತನನ ತೋಂ

೩

ನೆನಪು ಹಿಡಿ
ಮಂತ್ರ ನುಡಿ
ಕನ್ನಡವೇ ಓಂ
ಕನ್ನಡ ಓಂ
ಕನ್ನಡ ತೋಂ
ತನನ ತನನ ತೋಂ

೪

ನಾಡ – ಗುಡಿ
ತೂರಿ ಹಿಡಿ
ಹಾರಲಿ ಪಟ ತಾಂ
ಆಗಸದಲಿ
ನೆಗೆದಾಡಲಿ
ಕನ್ನಡ ತನನ ತೋಂ

೫

ನಾಡ ಬೆಡಗ
ಹಾಡು ಹುಡುಗ
ತನನ ತನನ ತೋಂ
ಕನ್ನಡದಲಿ
ನುಡಿ ಗುಡುಗಲಿ
ತನನ ತನನ ತೋಂ

(ತನನ ತೋಂ)

'ನಾಡಹಬ್ಬ' ಎಂಬ ಕವಿತೆಯು ಇಡೀ ಕನ್ನಡ ನಾಡಿನ ಮಕ್ಕಳು ಸಂತೋಷದಿಂದ ಕನ್ನಡಾಂಬೆಯ ನೆನೆದು ಕುಣಿದಾಡುತ್ತ ಆಚರಿಸಬೇಕಾದ ಹಬ್ಬ ಎಂಬುದನ್ನು ತಿಳಿಯಪಡಿಸುತ್ತಾರೆ -

೧.

ಉಳಿದ ಹಬ್ಬ ಇರಲಿ ಬಿಡಲಿ
ನಾಡ ಹಬ್ಬ ನಮ್ಮದು
ಇಂಥ ಹರುಷ ಇಂಥ ಸರಸ
ಯಾವ ಹಬ್ಬ ತರುವುದು ?

೨

ವಿಜಯನಗರದಲ್ಲಿ ಹಿಂದೆ
ನಮ್ಮ ನಾಡ ಅರಸರು
ತಮ್ಮ ಗೆಲುವ ತೋರಲೆಂದು
ನಾಡ ಹಬ್ಬ ಗೈದರು

೩

ಅಂದಿನಿಂದ ನಾಡ ಹಬ್ಬ
ವರುಷ ವರುಷ ಬರುತಿದೆ
ಮಹಾನವಮಿಯಲಿ ಅಹಾ!
ಹೊಸತು ಹರುಷ ತರುತಿದೆ

೪

ನೋಡಿದಲ್ಲಿ ತೋರಣಗಳ
ಅಂದು ತೂಗ ಬಿಡುವರು
ಹೆಣ್ಣುಮಕ್ಕಳಂಗಳದಲಿ
ರಂಗವಲ್ಲಿ ಇಡುವರು

೫

ಊರು ಊರೊಳಂದು ನಾಡ
ದೇವಿ ಪೂಜೆಗೊಳುವಳು
ಚೆಂದದಿಂದ ಬಾಳಿರೆಂದು
ನಮಗೆ ಹರಕೆಯೀವಳು

೬

ಅವಳ ಮುಂದೆ ಏನು ಚೆಂದ
        ನೃತ್ಯ ಗೀತ ವಾದ್ಯವು
ವಿಜಯದಶಮಿವರೆಗೆ ಹತ್ತೂ
        ದಿನವು ಆಟ ನೋಟವು

೭

ನಾಡ ಸಿರಿಯ ಬಣ್ಣಿಸುವರು
        ನಮ್ಮ ನಾಡ ಹಿರಿಯರು
ಅದನು ಕೇಳಿ ನಮಗೆ ಹುರುಪು
        ಹುಮ್ಮಸಗಳು ಬರುವವು

೮

ಎಲ್ಲ ದೇವರಲ್ಲಿ ನಮಗೆ
        ನಾಡದೇವಿ ಹಿರಿಯಳು
ಅವಳೆ ನಮ್ಮ ಹಿರಿಯ ತಾಯಿ
        ಮಮತೆಯಿಂದ ಹೊರೆವಳು

೯

ಉಳಿದ ಹಬ್ಬ ಇರಲಿ ಬಿಡಲಿ
        ನಾಡ ಹಬ್ಬ ನಮ್ಮದು
ಇಂಥ ಚೆಂದ ಆನಂದ
        ಯಾವ ಹಬ್ಬ ತರುವುದು ?

(ತನನ ತೋಂ)

೮. ಪದ್ಮಪಾಣಿ : ಡಾ॥ ಡಿ.ಎಸ್. ಕರ್ಕಿಯವರು ಬರೆದ ಗೀತ ರೂಪಕವಾಗಿದೆ. ಗೀತರೂಪಕವು ಡಾ॥ ಡಿ.ಎಸ್. ಕರ್ಕಿಯವರು ಅಜಂತಾ ಗುಹೆಯಲ್ಲಿ ಗೌತಮ ಬುದ್ಧನ ಸುಂದರ ನಯನ ಮನೋಹರ ವರ್ಣಚಿತ್ರದ ಪ್ರತಿಯನ್ನು ನೋಡಿ ಭಾವ ಪರವಶರಾಗಿ ಚಿತ್ರಿಸಿದುದಾಗಿದೆ.

ಡಾ॥ ಡಿ.ಎಸ್. ಕರ್ಕಿಯವರ ಗದ್ಯ ಕೃತಿಗಳು :

೧. ಕನ್ನಡ ಛಂದೋವಿಕಾಸ : ಇದು ಡಾ॥ ಡಿ.ಎಸ್. ಕರ್ಕಿಯವರು ೧೯೪೯ರಲ್ಲಿ ಬರೆದ ಪಿಎಚ್.ಡಿ ಸಂಶೋಧನಾ ಪ್ರಬಂಧವಾಗಿದೆ. ಕನ್ನಡದ

ಘನ ವಿದ್ವಾಂಸರಾದ ಪ್ರೊ. ಕೆ.ಜಿ. ಕುಂದಣಗಾರ ಅವರ ಮಾರ್ಗದರ್ಶನದಲ್ಲಿ ಕಾವ್ಯಕ್ಕೆ ಸಂಬಂಧಪಟ್ಟ ಛಂದಸ್ಸಿನ ವಿಷಯ ತೆಗೆದುಕೊಂಡು ಸಂಶೋಧನ ಮಹಾಪ್ರಬಂಧ ಬರೆದು ಅಂದಿನ ಮುಂಬಯಿ ವಿಶ್ವವಿದ್ಯಾಲಯಕ್ಕೆ ಅರ್ಪಿಸಿ ಪಿಎಚ್.ಡಿ ಪದವಿ ಪಡೆದರು. ಈ ಮಹಾ ಪ್ರಬಂಧದಲ್ಲಿ - ನಾದ ಪ್ರಪಂಚದಲ್ಲಿ ಛಂದಸ್ಸು, ಭಾವ ಮತ್ತು ಛಂದಸ್ಸು, ಛಂದಃ ಪ್ರಭೇದಗಳು, ಕನ್ನಡ ಛಂದದ ರಹಸ್ಯ, ತ್ರಿಪದಿ, ಚಂಪೂ ಸಂಪ್ರದಾಯ ಕರ್ನಾಟಕ ವಿಷಯ ಜಾತಿ, ದೇಸಿ: ರಗಳೆ, ಷಟ್ಪದಿ. ಸೀಸ ಮತ್ತು ಸಾಂಗತ್ಯ ಪ್ರಯೋಗಗಳು ಜಾನಪದ ಛಂದ, ಲಾವಣಿ ಬಂಧ, ಆಧುನಿಕ ಬಂಧಗಳು ಸಮಾರೋಪ ಎಂದು ಒಟ್ಟು ೧೪ ಗತಿ (ಅಧ್ಯಾಯ)ಗಳಿವೆ. ೩೩೪ ಪುಟಗಳ ಈ ಬೃಹತ್ ಗ್ರಂಥವು ಕನ್ನಡ ಕಾವ್ಯ ಪರಂಪರೆಗೆ, ವ್ಯಾಕರಣಾಭ್ಯಾಸಿಗಳಿಗೆ ಮಹತ್ವದ ಕೊಡುಗೆಯಾಗಿದೆ.

'ಛಂದೋನಟಿಗೆ' ಎಂಬ ಕವನ ಬರೆಯುವ ಮೂಲಕ ಛಂದೋವಿಕಾಸವನ್ನು ಹೃದಯಂಗಮಗೊಳಿಸಿದ್ದಾರೆ.

ಛಂದೋ ನಟಿಗೆ

೧.

ಓ ತಾಳ-ಲಯ-ಲೋಲೆ
ಶ್ರೀ ಕಾವ್ಯ-ಪದ ಲೀಲೆ
ಛಂದೋ- ನಟಿಯೆ ಚೆಂದ
ದಲ್ಲಿ ಬರುವೆ
ಭಾವವನು ಬಂಧದಲಿ
ಬಿಡಿಸಿ ತರುವೆ

೨

ಆರೋಹ ಅವರೋಹ
ನಿನ್ನ ಜೀವದ ಜೀವ
ತೈತಕದ ಲಯಕೆ ಸೆರೆ-
ಹಿಡಿವೆ ಮನವ
ನಾದ-ನದಿಯಲಿ ಈಜು

ಬಿಡುವೆ ತನುವ
೩
ತ್ರಿಪದಿ ಷಟ್‌ಪದಿಗಳು
ರಗಳೆ, ಸಾಂಗತ್ಯದಲಿ
ತಿರುಳುಗನ್ನಡದ ಲಯ
ಬೀರಿದವಳೇ
ಚರಕಾದಲೆತಕೆ ಕಿರಣ
ತೂರಿದವಳೇ
೪
ಇಂದಿನೀ ರಂಗದಲಿ
ನೂರೊಂದು ಭಂಗಿಯಲಿ
ಬಳು ಬಳುಕುವಂಗದಲಿ
ಲಾಸ್ಯವಾಡೆ
ಹೊಸತರಲಿ ಹೊಸತು ವಿ –
ನ್ಯಾಸ ಮೂಡೆ

೨. **ನಾಲ್ದೆಸೆಯ ನೋಟ** : ಇದೊಂದು ಡಾ. ಕರ್ಕಿಯವರ ಒಂಬತ್ತು ಲೇಖನಗಳ ಸಂಗ್ರಹವಾಗಿದೆ. ಜೀವನ, ಪ್ರಕೃತಿ, ಕಲೆ, ಕಾವ್ಯ ಎಂಬ ನಾಲ್ಕು ದಿಸೆಗಳಲ್ಲಿ ನೋಟ ಹರಿಸಿ ಲೇಖನಗಳನ್ನು ಬರೆದಿದ್ದಾರೆ. ರೂಪರೇಷೆ, ಜೀವನ ವಿಕಾಸ, ಸಾಧನ ಸಾಹಿತ್ಯ–ಸಂಸ್ಕೃತಿ–ಸೌರಭ, ಸ್ಫೂರ್ತಿಯ ಮೂರ್ತಿ, ಮೂರು ದೃಷ್ಟಿ, ಸ್ವಪ್ನ ಸತ್ಯ, ಕಂಬನಿ ಹೂನಗೆ ಪ್ರಸಾದ ಎಂಬ ಒಂಬತ್ತು ಲೇಖಗಳಲ್ಲಿ ಬದುಕನ್ನು ಬಿಂಬಿಸಿದ್ದಾರೆ.
೩. **ಮಕ್ಕಳ ಶಿಕ್ಷಣ** : ಎಂಬ ಕೃತಿಯಲ್ಲಿ ಮಕ್ಕಳು ಹೂಗಳಂತೆ ಕೋಮಲ, ಪ್ರಸನ್ನ, ಪರಿಮಳ ಹೊಂದಿವೆ. ಬಾಲ್ಯದಿಂದ ಪ್ರೌಢಾವಸ್ಥೆವರೆಗೆ ಎಂತಹ ಶಿಕ್ಷೆ ನೀಡಲ್ಪಡಬೇಕು, ಶಿಕ್ಷಕರಲ್ಲಿ ಸಹೃದಯತೆ, ಅಧ್ಯಯನಶೀಲತೆ, ಕಳಕಳಿ ಹೇಗಿರಬೇಕು ಎಂಬ ಬಗ್ಗೆ ಚಿಂತನೆಗೈದಿದ್ದಾರೆ. ಆತ್ಮ ಪ್ರೌಢಿಮೆ, ವೈಚಾರಿಕ, ನಿಸರ್ಗ, ಸಾಮಾಜಿಕ ಪ್ರಜ್ಞಾ ಶೀಕ್ಷಣದ ಅವಶ್ಯಕತೆ ವಿವರಿಸಿದ್ದಾರೆ.
೪. **ಐವರು ಶಿಕ್ಷಣ ತಜ್ಞರು ಹಾಗೂ ಬೋಧನಾ ಕ್ರಮ** : ಪ್ರಪಂಚದ ಐವರು ಮಹಾನ್ ಶಿಕ್ಷಣ ತಜ್ಞರ ವಿಚಾರಗಳು ಹಾಗೂ ಇಂದಿನ ಬೋಧನಾ

ಕ್ರಮ ಕುರಿತು ಅನುಭವಪೂರ್ಣವಾಗಿ, ಸ್ವಾನುಭಾವದಿಂದ ಈ ಕೃತಿ ರಚಿಸಿ ಶಿಕ್ಷಣ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಮಹದುಪಕಾರ ಮಾಡಿದ್ದಾರೆ.
೫. **ಸಾಹಿತ್ಯ-ಸಂಸ್ಕೃತಿ-ಶ್ರುತಿ** : ಇದೊಂದು ಸ್ವಂತ ಲೇಖನಗಳ ಸಂಗ್ರಹವಾಗಿದೆ. ಗ್ರಂಥದಲ್ಲಿ ಸಾಹಿತ್ಯವೆಂದರೇನು? ಸಂಸ್ಕೃತಿ ಎಂದರೇನು? ಸಾಹಿತ್ಯ ಮತ್ತು ಸಂಸ್ಕೃತಿಯ ಸಂಬಂಧ, ವ್ಯಕ್ತಿಯ ಬದುಕು ರೂಪಿಸುವಲ್ಲಿ ಇವುಗಳ ಪಾತ್ರ, ಸಾಹಿತ್ಯ, ಪ್ರಕೃತಿ, ಸಂಸ್ಕೃತಿ, ಕಲೆ, ಮಾನವನ ಉನ್ನತಿ, ಸುಸಂಸ್ಕೃತ ಬಾಳುವೆ ಕುರಿತು ಚಿಂತನಶೀಲ ಲೇಖನಗಳಲ್ಲಿ ಬಿಂಬಿಸಿದ್ದಾರೆ.
೬. **ಅಂಗಡಿ ದಂಪತಿಗಳು** : ಇರು ಗದಗಿನ ಜಗದ್ಗುರು ತೋಂಟದಾರ್ಯ ಮಠದಿಂದ ಲಿಂಗಾಯತ ಪುಣ್ಯ ಪುರುಷರ ಸಾಹಿತ್ಯ ರತ್ನಮಾಲೆಯ ೫೮ನೇ ಕೃತಿಯಾಗಿ ಪ್ರಕಟವಾದ ಗ್ರಂಥವಾಗಿದೆ. ಬೆಳಗಾವಿ ಜಿಲ್ಲೆಯ ಬೆಲ್ಲದಬಾಗೇವಾಡಿಯಲ್ಲಿ ಜನಿಸಿದ ಲಿಂ. ಷಣ್ಮುಖಪ್ಪನವರು ಅಂಗಡಿ ಹಾಗೂ ಶ್ರೀಮತಿ ಪದ್ಮಾವತಿದೇವಿ ಅಂಗಡಿ ಈ ದಂಪತಿಗಳು ಸಾಮಾಜಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಎಲ್ಲ ಕ್ಷೇತ್ರಗಳಲ್ಲಿ ಗೈದ ಸೇವೆಯನ್ನು ಈ ಗ್ರಂಥದಲ್ಲಿ ಡಾ॥ ಕರ್ಕಿಯವರು ವಿವರಿಸಿದ್ದಾರೆ. ಬೆಳಗಾವಿ ಜಿಲ್ಲೆ ಸಾರ್ವಜನಿಕ ಬದುಕಿನ ಅವಿಭಾಜ್ಯ ಅಂಗವಾಗಿ ಸೇವೆ ಸಲ್ಲಿಸಿದ ಅಂಗಡಿ ದಂಪತಿಗಳ ಜೀವನ ಆದರ್ಶಪೂರ್ಣವಾಗಿದೆ. ಇದೊಂದು ವ್ಯಕ್ತಿ ಚರಿತ್ರೆಯ ಗ್ರಂಥವಾಗಿದೆ. ಅಂಗಡಿ ಪದ್ಮಾವತಿದೇವಿಯವರನ್ನು ಗೌರವಭಾವದಿಂದ ಸ್ಮರಿಸಿಕೊಂಡು ಬರೆದ ಕವಿತೆ –

ಹೆಸರಿನಂತೆ ಹೃದಯ ಪದ್ಮ

ಮಾತೆ ನಿಮ್ಮ ಮಾತು ಮಾಣಿಕ್ಯದ ದೀಪ್ತಿ
ಹೆಸರಿನಂತೆ ಹೃದಯ ಪದ್ಮ ಮೃದು ಬಂಧುರ ರೀತಿ

ಆತಿಥ್ಯವು ನಿಮ್ಮ ಮನದ ಔದಾರ್ಯಕೆ ಸಾಕ್ಷಿ
ಮಕ್ಕಳುಣಲು ಒಲವ ಸೂಸಿ ತಣಿಯಳೇನು ತಾಯಿ?

ನಿಮಗೆ ಒಲಿದ ಸುಗುಣಶೀಲ ಪತಿಯ ಬದುಕಿನಲ್ಲಿ
ನೀವಾದಿರಿ ಬೆಳುದಿಂಗಳು ಬರೆದು ರಂಗವಲ್ಲಿ

ಅಚ್ಚಮನದ ನಿಚ್ಚ ಕಾಯಕದಲಿ ಬೆರೆಯೆ ಭಕ್ತಿ
ನಿಮ್ಮ ನಿಷ್ಠೆಯನ್ನು ಮೆಚ್ಚಿ ಬಂತಮೋಘ ಶಕ್ತಿ

ಕಲೆಯಾಯಿತು ಪಾಕಶಾಸ್ತ್ರ ನಿಮ್ಮ ಹಸ್ತದಲ್ಲಿ
ಗೃಹಿಣಿಯ ಗೃಹಕಾರ್ಯದಲ್ಲಿ ಚಿಗುರಿತು ಬಗೆ ಬಳ್ಳಿ
ಬರಿಯ ಬಿಜ್ಞೆಯಿಂದ ಬರದ ಸಾಹಿತ್ಯದ ಸಾರ
ಇಳಿದು ಬಂತು ನಿಮ್ಮೆದೆಯಲಿ, ಅರಳಿತು ಮಂದಾರ

ಚಿತ್ತ ಭೂಮಿಯಲ್ಲಿ ಕಲ್ಪಲತೆಯು ಕೊನರಿದಂತೆ
ಕಥೆ ಕಥೆಗಳು ಅರಳಿದುವಲ ನಿಮ್ಮ ಕಲ್ಪಕತೆಗೆ

ಒಳಗು ಹೊರಗು ಎಲ್ಲೆಲ್ಲೂ ಚೆಲ್ಲವರಿಯೆ ತೋಷ
ಜೀವನವೇ ಗೀತ ದಿನದ ಅನುಭವವೇ ಪ್ರಾಸ

ಶುಚಿ ಭಾವದ ರುಚಿ ನೀಡುತ ಮರೆಯಾದಿರಿ ನೀವು
ಸಜ್ಜನಿಕೆಯ ಸೆಲೆಯಾಗಲಿ ನಿಮ್ಮ ನುಡಿಯ ನೆನಹು

ಮಾತೆ ನಿಮ್ಮ ಮನದ ಮಾತು ಮಾಣಿಕ್ಯದ ದೀಪ್ತಿ
ಹೆಸರಿನಂತೆ ಹೃದಯ ಪದ್ಮ ಮೃದು ಬಂಧುರ ರೀತಿ

(ಕರಿಕೆ ಕಣಗಿಲು)

ಡಾ ॥ ಕರ್ಕಿಯವರ ಸಂಪಾದಿತ ಕೃತಿಗಳು :

೧. ಬಸವಣ್ಣನವರ ಜನಪ್ರಿಯ ವಚನಗಳು :

೧೨ನೇ ಶತಮಾನದಲ್ಲಿ ಸಕಲಜೀವಾತ್ಮರಿಗೆ ಲೇಸನೇ ಬಯಸಿದ, ಮಾನವಕುಲದ ಕಲ್ಯಾಣಕ್ಕಾಗಿ ಹೋರಾಡಿ, ಅನುಭವಮಂಟಪ ಸ್ಥಾಪಿಸಿ ವಿನೂತನವಾದ ಲಿಂಗಾಯತ ಧರ್ಮ, ಸಮಾಜ, ಸಂಸ್ಕೃತಿಯನ್ನು ರೂಪಿಸಿದ ವಿಶ್ವಗುರು ಬಸವಣ್ಣನವರ ಬಗ್ಗೆ ಡಾ॥ ಡಿ.ಎಸ್. ಕರ್ಕಿ ಅವರಿಗೆ ಅಪಾರ ಭಕ್ತಿ ಹಾಗೂ ಗೌರವ. ಬಸವಣ್ಣನವರ ವಚನಗಳು ಅಚ್ಚಕನ್ನಡದ ಅನುಭಾವ ಸಾಹಿತ್ಯ. ಬಸವಣ್ಣನವರ ಹೊಸಗನ್ನಡ ಸಾಹಿತ್ಯದ ಹಾಗೂ ೭೭೦ ಶರಣ – ಶರಣೆಯರ (ಸಾಹಿತಿಗಳ) ನಿರ್ಮಾಪಕರು ಎಂಬುದನ್ನು ಅವರು ಅರಿತಿದ್ದರು. ಬಸವಣ್ಣನವರ ವಚನಗಳನ್ನು ಸಂಪಾದಿಸಿ ಪ್ರಕಟಿಸಿ ಮಹದುಪಕಾರ ಮಾಡಿದ್ದಾರೆ.

೨. ಶರೀಫರ ಲೋಕಪ್ರಿಯ ಪದಗಳು :

ಈ ಕೃತಿಯನ್ನು ಡಾ॥ ಕರ್ಕಿಯವರು ಹಾಗೂ ತಲ್ಲೂರ ರಾಯನಗೌಡರು ಸಂಯುಕ್ತವಾಗಿ ಸಂಪಾದಿಸಿದ್ದಾರೆ. ಕನ್ನಡದ ಅನುಭಾವಿ

ಕವಿ ಶಿಶುನಾಳ ಶರೀಫರು ರಚಿಸಿದ ಅಧ್ಯಾತ್ಮದ, ಅನುಭಾವದ, ಲೋಕಗೀತೆಗಳನ್ನು ಸಂಪಾದಿಸಿ ಪ್ರಕಟಿಸಿರುವರು.

ಡಾ॥ ಕರ್ಕಿಯವರು ಆಧುನಿಕ ವಚನಕಾರರು :

ಡಾ॥ ಕರ್ಕಿಯವರು 'ಉಪಮಾತೀತ ಉಮಾಮಹೇಶ್ವರ' ಎಂಬ ವಚನಾಂಕಿತದಲ್ಲಿ ಅನೇಕ ವಚನಗಳನ್ನು ಬರೆದಿರುವರು. ಅವರ ಅಪ್ರಕಟಿತ ವಚನಗಳ ಸಂಕಲನ ಪ್ರಕಟವಾದರೆ ೨೦ನೇ ಶತಮಾನದ ಆಧುನಿಕ ವಚನಕಾರರಲ್ಲಿ ಒಬ್ಬರಾಗಿ ಕಂಗೊಳಿಸುವುದರಲ್ಲಿ ಯಾವ ಸಂಶಯವೂ ಇಲ್ಲ.

ಕವಿ, ಸಾಹಿತಿ, ವಿದ್ವಾಂಸರ ದೃಷ್ಟಿಯಲ್ಲಿ ಡಾ ॥ ಕರ್ಕಿ ಅವರು :

ನವೋದಯ ಕಾಲದ ಧೀಮಂತ ಕವಿ ಡಾ॥ ಡಿ.ಎಸ್.ಕರ್ಕಿ ಅವರನ್ನು ಕುರಿತು ನಮ್ಮ ನಾಡಿನ ಖ್ಯಾತ ಕವಿಗಳು, ಸಾಹಿತಿಗಳು, ವಿದ್ವಾಂಸರು ಗೌರವಪೂರ್ವಕವಾಗಿ ನುಡಿದ ಅಭಿಪ್ರಾಯಗಳು ಕೆಳಗಿನಂತಿವೆ –

೧. ಡಾ॥ ಡಿ.ಎಸ್.ಕರ್ಕಿ ಅವರು ಖ್ಯಾತ ಕವಿಗಳು ; ಸಾಹಿತ್ಯ ವಿಶಾರದರು, ತಮ್ಮ ಜ್ಞಾನದ ಫಲವನ್ನು ತರುಣರಿಗೆ ಹಂಚಲೆಂದೂ ತನ್ಮುಖೇನ ಪ್ರಯೋಜನ ವಿಸ್ತಾರವಾಗಿ ಹಬ್ಬಲೆಂದೂ ಶಿಕ್ಷಣವನ್ನೇ ತಮ್ಮ ಕಾರ್ಯರಂಗವನ್ನಾಗಿ ಮಾಡಿಕೊಂಡವರು.

– ಪ್ರೊ. ಕೆ.ಜಿ. ಕುಂದಣಗಾರ, ಬೆಳಗಾವಿ

೨. "ಕರ್ಕಿ ಎನ್ನುವ ಹೆಸರು ಕನ್ನಡಿಗರು ಮನಸ್ಸನ್ನು ತುಂಬಿಕೊಂಡು ಅವರನ್ನು ಪ್ರಸನ್ನಗೊಳಿಸಿದೆ. ಕರ್ಕಿಯವರಲ್ಲಿ ಕರ್ಣಾನಂದಕರವಾದ ನಾದ ಮಾಧುರ್ಯವಿದೆ. ಅವರ ಲಯವು ಲಯವಾಗುವಂಥದಲ್ಲ, ತಾಳುವಂಥದು. ಅವರ ತಾಳ-ಲಯಗಳೆರಡೂ ನಾದ ಬಿಂದು ತುಂಬಿಕೊಂಡು ಕನ್ನಡ ನಾಡಿನ ಜನರ ಮನಸ್ಸನ್ನು ಜುಮ್ಮೆನ್ನಿಸಿವೆ. ಕನ್ನಡದ ಜನರ ಮೈಯನ್ನು ಪುಳಕಿತಗೊಳಿಸಿವೆ."

–ಡಾ. ಪಾಟೀಲ ಪುಟ್ಟಪ್ಪ, ಹುಬ್ಬಳ್ಳಿ

೩. "ಸದಾ ನಗುಮೊಗದ, ಸಮಾಧಾನದ ಸಾತ್ವಿಕ ಕಳೆಯನ್ನುಕ್ಕಿಸುವ ಸರಸ ಸಜ್ಜನಿಕೆಯ ನಿರ್ಮಲ ಸ್ನೇಹಾಂತ:ಕರಣದ ಕವಿ ಕರ್ಕಿಯವರನ್ನು ಕಂಡಾಗಲೆಲ್ಲ ಅವರ ಪದ್ಯವೇ ಕಣ್ಣ ಮುಂದೆ ಕಟ್ಟಿದಂತಾಗುತ್ತಿತ್ತು. ಅವರು ನವೋದಯದ ಹಿರಿಯ ಕವಿಗಳಲ್ಲಿ ಒಬ್ಬರಾಗಿದ್ದರು. ನಿಜ ; ಆದರೂ

ತಮ್ಮ ಭಾವಾಭಿವ್ಯಕ್ತಿಗೆ ತಮಗೆ ಹಿರಿಯರಾದ ಮಾಸ್ತಿ, ಮಧುರಚೆನ್ನ, ಬೇಂದ್ರೆ, ಪುಟ್ಟಪ್ಪ, ವಿ.ಸಿ. ಒಂದು ದೀಕ್ಷೆಯನ್ನು ಕೊಟ್ಟಿರಬಹುದೆಂಬ ಭಾವನೆ ಅವರಿಗೆ ನಮ್ರತೆಯನ್ನೊದಗಿಸಿದ್ದಿತು.

ಕವಿತೆ ಸೌಂದರ್ಯದ ಲಯಾತ್ಮಕ ಸೃಷ್ಟಿ ಎಂಬ ಮಾತು ಕರ್ಕಿಯವರ ಕಾವ್ಯಕ್ಕೆ ಹೆಚ್ಚು ಅನ್ವಯವಾಗುವಂತಹದು. **– ಶ್ರೀ ಚೆನ್ನವೀರ ಕಣವಿ, ಧಾರವಾಡ**

೪. ಹಲವು ಬಗೆಯ ವಸ್ತುಗಳನ್ನು ಕಾವ್ಯವಾಗಿಸುವ ಕರ್ಕಿಯವರು ಸ್ವಭಾವತಃ ಕೋಮಲ ಪ್ರಕೃತಿಯವರೆಂಬುದನ್ನು ಇಲ್ಲಿಯ ಕವಿತೆಗಳು ತೋರಿಸಿಕೊಡುತ್ತವೆ. ನಯವಾದ, ಮೃದು ವಾದ ಪದಗಳು ಕರ್ಕಿಯವರ ಸೊತ್ತಾಗಿದ್ದು, ಅವರು ಅವುಗಳನ್ನು ಲೀಲಾಜಾಲವಾಗಿ ಬಳಸಿಕೊಳ್ಳುತ್ತಾರೆ. ದ್ವಿತ್ವ ಪದಗಳನ್ನು ಅವರು ಸಾಧ್ಯವಿದ್ದಷ್ಟು ಬಿಟ್ಟು ಬಿಡುತ್ತಾರೆ. ಕಾವ್ಯದ ಬಂಧದಲ್ಲಿ ವೈವಿಧ್ಯವಿರುವುದರೊಂದಿಗೆ ರೇಶಿಮೆಯಂಥ ನಯಗಾರಿಕೆಯೂ ಇದೆ. ಒರಟು, ಕಟುತ್ವ, ರೊಚ್ಚು, ರೋಷ ಇವು ಅವರ ಸಮೀಪಕ್ಕೆ ಸುಳಿಯಲಾರವು. ಸುಲಿದ ಬಾಳೆಯ ಹಣ್ಣಿನಂಥ ಮಾಧುರ್ಯ ಅವರ ಕಾವ್ಯಕ್ಕಿದೆ ಎಂದು ಹೇಳಿದರೆ ಉತ್ಪ್ರೇಕ್ಷೆಯಾಗದು. ರಮ್ಯ ಸಂಪ್ರದಾಯದ ಸುಸಂಸ್ಕೃತ ಹಿರಿಯ ಕವಿಯ ಮನಸ್ಸು ಎಷ್ಟು ಪಕ್ವವಾದದ್ದು ಎಂಬುದನ್ನು ನೋಡಯಸುವವರು ಕರ್ಕಿಯವರ ಕವಿತೆಗಳನ್ನು ಒಮ್ಮೆ ಓದಬೇಕು ಎಂದು ಬೆರಳಿಟ್ಟು ತೋರಿಸುವಷ್ಟು ಅವರ ಕವಿತೆಗಳ ವೈಶಿಷ್ಟ್ಯವಿದೆ. ಕಾಲಮಾನದ ಹಾಗೂ ಕಾವ್ಯದ ಬದಲಾವಣೆ ಏನೇ ಇರಲಿ, ಕರ್ಕಿಯವರ ಕವಿತೆಗಳಿಗೆ ಅವುಗಳದೇ ಆದ ಶುಚಿ, ರುಚಿ ಇರುವುದನ್ನು ಕಾವ್ಯ ರಸಿಕರು ಗುರುತಿಸದೇ ಇರಲಾರರು.

– ಡಾ. ಗುರುಲಿಂಗ ಕಾಪಸೆ, ಧಾರವಾಡ

೫. "ಬದುಕನ್ನು ಹಲವು ನಿಟ್ಟಿನಿಂದ ನೋಡಬಹುದು. ದಿವಂಗತ ಡಾ. ಡಿ.ಎಸ್. ಕರ್ಕಿಯವರು ಇದನ್ನು ನಾಲ್ಕು ನಿಟ್ಟಿನಿಂದ ನೋಡಿದ್ದಾರೆ. ಅವುಗಳನ್ನು ಅವರು ಹೀಗೆ ವಿಂಗಡಿಸಿದ್ದಾರೆ – ಜೀವನ, ಪ್ರಕೃತಿ, ಕಲೆ ಮತ್ತು ಕಾವ್ಯ ಎಂದು.

– ಡಾ. ಬಿ.ಸಿ. ಜವಳಿ, ಧಾರವಾಡ

೬ "ತಮ್ಮ ಕಾವ್ಯದ ಬಗೆಗೆ ಯಾವುದೇ ಭ್ರಮೆಗಳನ್ನು ಬೆಳೆಸಿಕೊಳ್ಳದೆ ಸದುವಿನಯದ ಸಾಕಾರವಾಗಿದ್ದ ಕವಿ ಡಾ. ಕರ್ಕಿಯವರು ತಮ್ಮ ಕಾವ್ಯದಷ್ಟೇ ಸರಳ ಮತ್ತು ಕಾವ್ಯಕ್ಕಿಂತ ಉದಾತ್ತ ವ್ಯಕ್ತಿತ್ವ ಪಡೆದವರಾಗಿದ್ದರು! ಆದ್ದರಿಂದಲೇ

ಅವರು ತಮ್ಮ ಜೀವಿತದ ಅವಧಿಯಲ್ಲಿಯೇ ಒಂದು ಲಿಜೆಂಡರರಿ ವ್ಯಕ್ತಿಯಾದರು."

–ಡಾ. ದೇವೇಂದ್ರಕುಮಾರ ಹಕಾರಿ, ಧಾರವಾಡ

೭ "ನಾಡಿನ ಸತ್ವ ಮಾನವನ ಬಾಳಿಗೆ ಬೆಳಕನ್ನೀಯುತ್ತಿದೆ. ಕನ್ನಡದ ಬಲವು, ಒಲವು, ಫಲವು ಒಟ್ಟುಗೂಡಿ "ಹಚ್ಚೇವು ಕನ್ನಡದ ದೀಪ" ಎಂಬ ವಾಣಿ ಕರ್ಕಿ ಕವನದಲ್ಲಿ ಭಾವಪೂರ್ಣವಾಗಿ, ಪರಿಣಾಮಕಾರಿಯಾಗಿ ಹೊರಹೊಮ್ಮಿ ಬಂದಿದೆ. ಸ್ವತಂತ್ರ ಭಾರತದ ದೀಪೋತ್ಸವದಲ್ಲಿ ಕನ್ನಡದ ಪ್ರಣತಿಯೂ ಉಜ್ವಲವಾಗಿ ಮಿನುಗಬೇಕೆಂಬುದು ಕವಿಯ ಹಂಬಲವಾಗಿದೆ. ಅದು ನಮ್ಮೆಲ್ಲರ ಹಂಬಲವೂ ಅಹುದು ಜನತೆಯ ಹಂಬಲ ಕವಿ ವಾಣಿಯಲ್ಲಿ ಸುರಮ್ಯವಾಗಿ ಮೂಡಿಬರುತ್ತದೆ."

– ಪ್ರೊ. ಸ.ಸ. ಮಾಳವಾಡ, ಧಾರವಾಡ

೮. "ಮಲೆನಾಡಿನ ಗಿರಿ ನಿರ್ಝರದಂತೆಯೇ ಸ್ವಚ್ಛಂದವಾಗಿ, ಪವಿತ್ರವಾಗಿ, ಪಾವನವಾಗಿ, ಅವರ ಕಾವ್ಯದ ಸೆಲೆಯು ಹೊರಹೊಮ್ಮಿದೆ. ಅದರ ಮಂಜುಳಗಾನಕ್ಕೆ ಮೋಹಿಸದವರು ವಿರಳ. ಈ ಹೊನಲಿನಲ್ಲಿ ಮೀಯುವುದು ಆರೋಗ್ಯಕರ, ಆಹ್ಲಾದಕರ. ಡಾ. ಕರ್ಕಿಯವರ ಈ ಭಾವತೀರ್ಥದಲ್ಲಿ ಶುದ್ಧ ಹೃದಯದ ಸಂಸ್ಕಾರವಿದೆ. ಪುನೀತಚಿತ್ತದ ಪ್ರಸನ್ನತೆಯಿದೆ. ಇದನ್ನು ಗುರುತಿಸಿದವರಿಗೆ ಅವರ ಕಾವ್ಯವಾಚನದಿಂದ ಅನುಪಮ ಆನಂದವಾಗುತ್ತದೆ."

– ಡಾ. ವಿ.ಕೃ. ಗೋಕಾಕ ಮುಂಬಯಿ

೯. " ಕವಿ ಕರ್ಕಿಯವರು ಎಲ್ಲೆಲ್ಲೂ ಸೌಂದರ್ಯವನ್ನೂ ರಮಣೀಯತೆಯನ್ನು ಕಂಡವರು ಕಾಣುತ್ತಿದ್ದವರು. ಕನ್ನಡ ಅಕ್ಷರಮಾಲೆಯೆ ಇರಲಿ, ಹೊಳೆವ ನಕ್ಷತ್ರಗಳೆ ಇರಲಿ ಅವರು ಅಲ್ಲೆಲ್ಲ ಕಾಣುತ್ತಿದ್ದುದು ಸೌಂದರ್ಯವನ್ನು.

– ಪ್ರೊ. ಪಿ.ಕೆ. ಬಾಗೋಜಿ, ಬೆಳಗಾವಿ

೧೦. "ಕುವೆಂಪು, ಬೇಂದ್ರೆ, ನರಸಿಂಹಸ್ವಾಮಿ ಅವರಂತೆ ಉತ್ತರ ಕರ್ನಾಟಕದಲ್ಲಿ ಡಾ|| ಡಿ.ಎಸ್. ಕರ್ಕಿ ಅವರು ಮಹತ್ವದ ಕವಿಗಳಲ್ಲಿ ಒಬ್ಬರಾಗಿದ್ದಾರೆ. ಬೆಳಗಾವಿಯಲ್ಲಿದ್ದಾಗ ಅವರು ನನಗೆ ಸ್ಫೂರ್ತಿ, ಪ್ರೇರಣೆಯನ್ನು ಕೊಟ್ಟ ಕವಿ. ಈ ಸಂದರ್ಭದಲ್ಲಿ ನಾನು ಕವಿಗಳಾದ ಈಶ್ವರ ಸಣಕಲ್, ಎಸ್.ಡಿ. ಇಂಚಲ, ಬ,ಗಂ. ತುರಮರಿ ಅವರನ್ನು

ಸ್ಮರಿಸುವುದು ಅನಿವಾರ್ಯ. ಡಿ.ಎಸ್. ಕರ್ಕಿ ಅವರು ನನಗೆ ಅತ್ಯಂತ ಆತ್ಮೀಯ ಕವಿಗಳಾಗಿದ್ದರು. ಡಾ॥ ಡಿ.ಎಸ್. ಕರ್ಕಿ ಅವರು ಅತ್ಯಂತ ಸಾತ್ವಿಕ ನಾಜೂಕಾದ ಭಾವಗಳನ್ನು ಗ್ರಹಿಸಿ ಅನುಭವಿಸಿ ಪ್ರಾಮಾಣಿಕವಾಗಿ ಭಾವಗೀತಗಳಲ್ಲಿ ಅಭಿವ್ಯಕ್ತಗೊಳಿಸುತ್ತಿದ್ದರು. ಅವರ ಕವಿತೆಗಳು ಮೃದು ಮಧುರ ಗೀತಗಳಾಗಿ ಗಮನ ಸೆಳೆದು ಕವಿ ಮಧುರ ಚೆನ್ನರ ಗೀತಗಳನ್ನು ನೆನಪಿಗೆ ತರುತ್ತಿದ್ದವು. ಮಾಧುರ್ಯದ ಭಾವನೆಗಳೆ ಅವರ ಕವಿತೆಗಳ ಜೀವಾಳವಾಗಿದ್ದವು. ಇನ್ನಿತರ ಕವಿಗಳಿಗಿಂತಲೂ ಕರ್ಕಿಯವರು ವಿಶಿಷ್ಟ ಧೋರಣೆಯ ಮಧುರ ಕವಿಗಳಾಗಿದ್ದರು. ಅವರ ಭಾವ ತೀರ್ಥ ಅತ್ಯಂತ ಮಹತ್ವದ ಕವಿತೆಗಳ ಸಂಕಲನ.

– ಡಾ॥ ಬುದ್ದಣ್ಣ ಹಿಂಗಮಿರೆ, ಧಾರವಾಡ.

೧೧. 'ಕನ್ನಡ ಸಾಹಿತ್ಯದ ಪ್ರವರ್ಧಮಾನಕ್ಕೆ ಅವಿರತವಾಗಿ ಶ್ರಮಿಸಿ, ಸಾಧನೆ ಪ್ರಸಿದ್ಧಿ ಪಡೆದಿರುವ ಡಾ॥ ಡಿ.ಎಸ್. ಕರ್ಕಿಯವರು ಜನ್ಮಶತಮಾನೋತ್ಸವ ಸಂಭ್ರಮ ಸಮಯದಿ "ಹಚ್ಚೇವು ಕನ್ನಡದ ದೀಪ"ದ ಕಾಂತಿ ಇನ್ನಷ್ಟು ಜಾಜ್ವಲ್ಯಮಾನವಾಗುತ್ತಲಿದೆ. ಕರ್ನಾಟಕದ ನಾಮಾಂಕಿತ ಕವಿಗಳಲ್ಲಿ ಡಾ. ಕರ್ಕಿಯವರೂ ಒಬ್ಬರು. ಅವರು ಕನ್ನಡ ಕಾವ್ಯ ಶಕ್ತಿ ಕೇಂದ್ರವಾಗಿ ಇಂದಿಗೂ ಚೇತನ ನೀಡುವ ರಸಗಂಗೆಯಾಗಿದ್ದಾರೆ. ಸೌಜನ್ಯ, ಮುಗ್ಧತೆ, ಪ್ರಸನ್ನತೆ, ನಯನಾಜೂಕು ಅವರ ವ್ಯಕ್ತಿತ್ವದಂತೆ ಅವರ ಕಾವ್ಯವೂ ಸಹ ಮೃದುವಾಗಿದೆ. ಮಧುರವಾಗಿದೆ. ಅದರಂತೆ ಮನದುಂಬಿ ಸಂತೃಪ್ತಿ ಭಾವ ಚಿಮ್ಮಿಸುವ ಮಂಜುಳ ನಿನಾದವಾಗಿದೆ.

– ಸ.ರಾ. ಸುಳಕೂಡೆ, ಬೆಳಗಾವಿ.

೧೨. ಡಾ॥ ಡಿ.ಎಸ್. ಕರ್ಕಿಯವರ ಕಾವ್ಯದ ವೈಶಿಷ್ಟ್ಯವೆಂದರೆ ನವೋದಯ ಪರಂಪರೆಯಲ್ಲಿ ಬರೆಯಲಾರಂಭಿಸಿ ಅವರು ತಮ್ಮ ಮನೋಧರ್ಮಕ್ಕೆ ಹಿಡಿಸಿದ ಆ ಪರಂಪರೆಗೆ ಕೊನೆತನಕ ಅಂಟಿಕೊಂಡರೆಂಬುದು ಗಮನಿಸಬೇಕಾದ ಸಂಗತಿ. ಅವರ ಜೀವಿತ ಕಾಲದಲ್ಲಿ ಕನ್ನಡ ಕಾವ್ಯ ಹಲವಾರು ಹೊರಳುಗಳನ್ನು ಅಬ್ಬರದ ಚಳವಳಿಗಳನ್ನು ಕಂಡರೂ ನವೋದಯ ಪರಂಪರೆಯಿಂದ ಕದಲದೇ ನಿಸರ್ಗದ ಸೌಂದರ್ಯ– ಸತ್ವದ, ಎಲ್ಲ ಒಳಿತಿನ ಆರಾಧಕರೆಂಬಂತೆ ಅತ್ಯುತ್ತಮವೆನ್ನುವ ಕವನಗಳನ್ನು ಅವರ ಕೊನೆಯ ಕರಿಕೆ ಕಣಗಿಲ ಸಂಕಲನದಲ್ಲೂ ಕಾವ್ಯ ಲೋಕಕ್ಕೆ ನೀಡಿದರು. ಸಿನಿಕತನ ಅವರ ಬಳಿ ಸುಳಿಯಲಿಲ್ಲ. ಡಾ॥ ಡಿ.ಎಸ್. ಕರ್ಕಿಯವರು ಕನ್ನಡನಾಡು ನುಡಿಯ ದೀಕ್ಷೆ ತೊಟ್ಟಿದ್ದರು. ಕನ್ನಡ ನಾಡಿನ ಸೌಂದರ್ಯ,

ಸಂಸ್ಕೃತಿ ಹಾಗೂ ಭಾಷೆಯ ಹಿರಿಮೆಯನ್ನು ಅವರಷ್ಟು ಆರಾಧಿಸಿದವರು ಕುವೆಂಪು ಅವರನ್ನು ಹೊರತುಪಡಿಸಿದರೆ ಬೇರೊಬ್ಬರಿಲ್ಲ. ಲಯವಿಲ್ಲದ ಕವಿತೆ ಕಾವ್ಯವಾಗಲಾರದು. ಇಂದಿನ ತಲೆಮಾರಿನ ಕವಿಗಳು ಕರ್ಕಿಯವರಿಂದ ಕಲಿಯುವ ಅಂಶಗಳು ಬಹಳವಿವೆ."

– ಶ್ರೀ ಜಗದೀಶ ಮಂಗಳೂರಮಠ, ಹುಬ್ಬಳ್ಳಿ

೧೩. ನವೋದಯ ಸಾಹಿತ್ಯ ಪರಂಪರೆಯ ಕವಿಗಳ ಸಾಲಿನಲ್ಲಿ ಎದ್ದು, ಕಾಣುವ ಹಿರಿಯ ಕವಿಗಳಲ್ಲಿ ನಮ್ಮ ಡಾ॥ ಡಿ.ಎಸ್. ಕರ್ಕಿಯವರು ಒಬ್ಬರು. ಗಡಿ ಜಿಲ್ಲೆಯ ಗಂಡುಮೆಟ್ಟಿನ ನಾಡಾದ ಬೆಳಗಾವಿ ಜಿಲ್ಲೆಯವರಾದ ಇವರು ಸೌಜನ್ಯ ಸಾಕಾರದ ಗುಡಿಯನ್ನು ಕಟ್ಟಲು ಹಗಲಿರುಳು ಶ್ರಮಿಸಿ, ನಾಡಿನ ಜನರಿಗೆ ಕನ್ನಡದ ಕಂಪನ್ನು ಮೂಡಿಸಿ, ಕವಿಗಳಿಗೆ ಮಧುರವಾದ ಇಂಪನ್ನು ನೀಡಿದವರು. ಸವಿಗನ್ನಡದ ಭಾಷಾಭಿಮಾನ ಹೊಂದಿದ ಈ ಕವಿ ಆ ದಿನಗಳನ್ನು ಕನ್ನಡವೆಂದರೆ ಅಭಿಮಾನ ತೋರದ ಜನರಿಗೆ 'ಹಚ್ಚೇವು ಕನ್ನಡದ ದೀಪ'ವನ್ನು ಹಾಡಿ ಜನಮನದಲ್ಲಿ ಕನ್ನಡದ ಕೆಚ್ಚನ್ನು ತುಂಬಿದರು. ರಾಷ್ಟ್ರೀಯ ಪುನರುತ್ಥಾನದ ಚಳುವಳಿ, ಸ್ವಾತಂತ್ರ್ಯ ಸಂಗ್ರಾಮದ ಕಾಲ ಹಾಗೂ ಒಡೆದುಹೋದ ಕನ್ನಡ ನಾಡನ್ನು ಒಂದುಗೂಡಿಸುವ ಏಕೀಕರಣ ಚಳುವಳಿ ಆರಂಭ ಇವು ಅವರ ಕಾವ್ಯ ಪ್ರೇರಣೆಗೆ ನಾಂದಿಯಾಗಿದ್ದವು. ಇದರ ಜೊತೆಗೆ ಸೃಷ್ಟಿ ಸೌಂದರ್ಯದ ಆರಾಧನೆ, ವರ್ಣನೆ. ನಾಡು–ನುಡಿಯ ಅಭಿಮಾನ, ನಮ್ಮ ಆದರ್ಶ ವ್ಯಕ್ತಿಗಳ ಬದುಕು ಇವು ಕವನಗಳ ವಸ್ತುವಾಗಿ ತಮ್ಮದೇ ಅದ ಲಯವನ್ನು ಕಂಡುಕೊಂಡು ಉತ್ತಮವಾದ ಕವಿತೆಗಳಾಗಿ ಹೊರಹೊಮ್ಮಿದವು.

ಡಾ॥ ಕರ್ಕಿಯವರು ಕನ್ನಡ ಸಾರಸ್ವತ ಲೋಕದ ಅಮರ ಕವಿ. ಇವರ ಸಾಹಿತ್ಯ ಕನ್ನಡ ನಾಡು ಎಂದೆಂದಿಗೂ ಮರೆಯುವಂತಿಲ್ಲ. ಇವರ ಸಂಕಲನಗಳು ಸಹೃದಯರ ಮನದಲ್ಲಿ ಅಚ್ಚಳಿಯದೆ ಉಳಿಯುವಂತಹದು. ಕನ್ನಡದೀಪವನ್ನು ಸದಾ ಬೆಳಗುವಂಥ ಸಾಹಿತ್ಯವನ್ನು ಕವಿ ನಾಡಿಗೆ ನೀಡಿದ್ದಾರೆ.

– ಶ್ರೀಶೈಲ ಭೀ. ಕಂಕಣವಾಡಿ, ಬೆಳಗಾವಿ.

೧೪. "ಡಾ॥ ಡಿ.ಎಸ್.ಕರ್ಕಿಯವರು ಕನ್ನಡದ 'ಭಾವತೀರ್ಥ'ದ ನಕ್ಷತ್ರಗಾನವನ್ನು ಹಾಡಿದ ಕವಿವರ್ಯರಾಗಿದ್ದಾರೆ. ಹೊಸಗನ್ನಡದ ಸಾಹಿತ್ಯದ ಇಪ್ಪತ್ತನೆಯ ಶತಮಾನದ ಪ್ರಮುಖ ಕವಿಗಳ ಮಾಲಿಕೆಯಲ್ಲಿ ಮಿನುಗುವ ಕವಿ ಹೌದು."

– ಡಾ. ನಿಂಗಣ್ಣ ಸಣ್ಣಕ್ಕಿ.

೧೫. ೨೦ನೆಯ ಶತಮಾನದ ಮಧ್ಯಭಾಗದಲ್ಲಿ ವರಕವಿಗಳೆಂದು ಮೈಸೂರು ಪ್ರಾಂತದಲ್ಲಿ ಗುರುತಿಸಿಕೊಂಡವರು ರಾಷ್ಟ್ರಕವಿ ದಿ: ಡಾ. ಪುಟ್ಟಪ್ಪನವರಾದರೆ ಉತ್ತರ ಕರ್ನಾಟಕದಲ್ಲಿ ಗುರುತಿಸಿಕೊಂಡವರು ಡಾ॥ ಕರ್ಕಿಯವರು. ಕುವೆಂಪು ಅವರು ಮೈಸೂರಿನಲ್ಲಿ ಅರಳಿದರೆ ಶ್ರೀ ದುಂಡಪ್ಪನವರು ಹುಬ್ಬಳ್ಳಿಯಲ್ಲಿ ಅರಳಿದರು.

"ನಡೆ ಚೆನ್ನ ನುಡಿ ಚೆನ್ನ ಎಲ್ಲಿ ನೋಡಿದಡಲ್ಲಿ ಚೆನ್ನ ॥
ಪ್ರಮಥರೋಳಗೆ ಚೆನ್ನ ಪುರಾತನರೊಳಗೆ ಚೆನ್ನ
ವಿಶ್ವಗುರು ಬಸವಣ್ಣನವರ ಅನುಭಾವದ ನಡೆ-ನುಡಿ

ಹೊಂದಿದ ಮಾತಿನ ಪ್ರತ್ಯಕ್ಷ ದೇವರು ಡಾ॥ ದುಂಡಪ್ಪನವರು ಹುದ್ದೆಯಲ್ಲಿ ಕಾಣಿಸಿಕೊಂಡುದಕ್ಕಿಂತ ಕರ್ಕಿ ಅಜ್ಜವರು ಎಂದು ಗುರುತಿಸಿಕೊಂಡಿರುವದು ಅವರ ವೈಶಿಷ್ಟ್ಯ. ಡಾ॥ ಕರ್ಕಿಯವರು ಹೃದಯದಿಂದ ಶ್ರೀಮಂತರು, ನಿಗರ್ವಿಗಳು, ವಿದ್ಯಾಸಂಪತ್ತಿನಿಂದ ಹಣ್ಣಾದ ಮರವಾಗಿದ್ದರು.

– ಗುರುದೇವ ಸಿ.ಬ. ಮರಿಗೌಡರ ಉಣಕಲ್ಲ, ಹುಬ್ಬಳ್ಳಿ.

ಡಾ॥ ಡಿ.ಎಸ್. ಕರ್ಕಿಯವರ ಕೌಟುಂಬಿಕ ಜೀವನ :

'ಸತಿ-ಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎಂಬ ಶರಣವಾಣಿಯಂತೆ ಸುಮಧುರ ಶರಣ ಜೀವನವನ್ನು ಬಾಳಿದವರು ಡಾ. ಕರ್ಕಿಯವರು. ಸೋದರಮಾವ ಶ್ರೀ ಈಶ್ವರಪ್ಪ ಕಣಗಲಿಯವರು ಸೋದರಳಿಯ ದುಂಡಪ್ಪನಿಗೆ ವಿದ್ಯೆ-ಬುದ್ಧಿಯ ಕಲಿಸಿ, ವಿದ್ವಾನ್‌ನನ್ನಾಗಿಸಿ, ತಮ್ಮ ಮಗಳು 'ಪಾರ್ವತಿ'ಯನ್ನು ಕೊಟ್ಟು ಕಲ್ಯಾಣ ಮಾಡಿದರು.

ಡಾ॥ ಡಿ.ಎಸ್. ಕರ್ಕಿ ದಂಪತಿಗಳಿಗೆ ರಾಜಶೇಖರ ಆನಂದ, ರವೀಂದ್ರ, ಶಶಿಕಾಂತ ಎಂಬ ನಾಲ್ಕು ಜನ ಪುತ್ರರು ಜನಿಸಿದರು. ಕೊನೆಗೆ ಶೈಲಜಾ ಎಂಬ ಮಗಳು ಜನಿಸಿದಳು. ನಾಲ್ಕು ಜನ ಗಂಡುಮಕ್ಕಳ ನಂತರ ಹೆಣ್ಣುಮಗು ಜನಿಸಿದಾಗ ತುಂಬಾ ಸಂತಸಪಟ್ಟರು. ಆ ಸಂದರ್ಭದಲ್ಲಿ ಬರೆದ ವಾತ್ಸಲ್ಯಪೂರ್ಣವಾದ ಸುಂದರ ಕವಿತೆಯೊಂದು ಮೂಡಿ ಬಂದಿತು –

ಶೈಲನಂದಿನಿ (ಮಗಳು ಶೈಲಜಾ ಜನಿಸಿದಾಗ ಮೂಡಿ ಬಂದ ಕವಿತೆ)

ಮೂಡಿದಳು ಬಾಲೆ ಕಲ್ಪನೆಯ ಗಿರಿ ಶೃಂಗದಲಿ
ಶೈಲಯೋಗಿಯ ಧವಳ ಧ್ಯಾನಜಾತೆ
ಮೇಲೆ ಹರಡಿದ ನೀಲನಭದ ಅಭವನಂಗವನು

ಮೀಸಿದಳು ಹಾಸದಲಿ ವಿಶ್ವಮಾತೆ

ಉಷೆ ಯಾರು? ಗಿರಿನಂದನೆಯ ಮಂದಹಾಸವಲ!
ದಿನಮಣಿಯೋ? ಮಣಿಮಕುಟ ದಗ್ರವಜ್ರ
ಗೌರವರ್ಣವು ಸಾಕ್ಷಿ ಮನದ ಮಂದಾರಕ್ಕೆ
ಚಿತ್ತವೋ? - ಸುಪ್ರಸನ್ನತೆಯ ಚಿತ್ರ

ಹಿಮಗಿರಿಯ ಸುತ್ತಿದ ಅನಂತ ಅನುಪಮ ಶಾಂತ
ಶೂನ್ಯಕೆ ಸುಚೈತವೀಯಲೆಂದೆ?
ಶೈಲದಲಿ ಎದ್ದ ಶುಭ್ರಾಭ್ರಶೋಭಿತ ಬಾಲೆ
ಎತ್ತಿದಳು ಜಗದ ಚಿತ್ತವನು ಬಾನ್‌ಗೆ

ಸ್ಪಂದಿಸಿತು ಶೈಲನಂದಿನಿಯುದಯದಾನಂದ
ಛಂದಕೆ ನೀಲಮಾ ವಿಶ್ವವೀಣೆ
ತುಳುಕಿತ್ತು ಕಲ್ಯಾಣರಾಗ ಎಲ್ಲೆಡೆ ತಾನೆ
ಹನಿದಂತೆ ಕಲ್ಯಾಣಿಯೆದೆಯ ಸುಧೆಯೆ

(ಕರಿಕೆ ಕಣಗಿಲು)

ಮಗಳು ಜನಿಸಿದಾಗ ಕವಿಹೃದಯದಿಂದ ರೂಪು ತಳೆದ ಇಂತಹ ಕವಿತೆಯು ಕನ್ನಡ ಸಾರಸ್ವತ ಪ್ರಪಂಚದಲ್ಲಿ ಅಪೂರ್ವವಾದುದು, ಅತಿವಿರಳವಾದುದಾಗಿದೆ.

ಡಾ॥ ಕರ್ಕಿಯವರು ಜೀವನದಲ್ಲಿ ಸುಖ-ದುಃಖಗಳೆರಡನ್ನೂ ಅನುಭವಿಸಿದರು. ಬಾಲ್ಯದಲ್ಲಿ ತಂದೆ-ತಾಯಿಯರನ್ನು ಕಳೆದುಕೊಂಡ ದುಃಖ; ಮಾವನ ಪ್ರೀತಿಯಲ್ಲಿ ಆ ದುಃಖ ಮರೆತು ವಿದ್ಯಾರ್ಜನೆಗೈದರು. ಮಾವನ ಮಮತೆಯಲಿ ಮಿಂದು, ಸೋದರ ಮಾವನ ಮಗಳು ಪಾರ್ವತಿಯನ್ನು ಮದುವೆಯಾಗಿ ಐದು ಜನ ಮಕ್ಕಳನ್ನು ಪಡೆದು ಆನಂದ ಸಾಗರದಲ್ಲಿ ವಿರಹಿಸಿದರು. ಮುಂದೆ ರಾಜಶೇಖರ ಹಾಗೂ ಆನಂದ ಎಂಬ ಗಂಡುಮಕ್ಕಳಿಬ್ಬರು ಅಕಾಲಿಕ ನಿಧನರಾದಾಗ ದುಃಖದಿಂದ ಜರ್ಜರಿತರಾದರು. ಭಾವಜೀವಿ ಕವಿ ಹೃದಯಿ ಈ ನೋವನ್ನೂ ಸಹ ಅಂತರಂಗದಲ್ಲಿ ಅರಗಿಸಿಕೊಂಡರು.

ಸೋದರಮಾವ ಈಶ್ವರಪ್ಪನವರು ಲಿಂಗೈಕ್ಯರಾದಾಗ ಸೋದರಮಾವನ ಪಿತೃವಾತ್ಸಲ್ಯವನ್ನು ನೆನೆದು ಕಂಬನಿ ಮಿಡಿದರು. ಅದುವೇ **ಮಾವಿನೊಡಲು** ಎಂಬು ಕವಿತೆಯಾಗಿ ಹೊರಹೊಮ್ಮಿತು.

ಮಾವಿನಂತೆ ಮೃದು ಮಧುರವು
ಮಾವ, ನಿಮ್ಮ ಒಡಲು
ಮನವು ನಿಮ್ಮ ನೆನೆದ ಚಣವೆ
ಹೊಳೆವುದು ಚೆಂಗಣಿಗಿಲು

ತಾಳ್ಮೆಗೊಂದು ನೈಜ ಬಿಂಬ
ನಿಮ್ಮ ಸಹಜ ನಡೆಯು
ದಿನವು ಹಸನು ಮನದ ಗೆಯ್ಮೆ
ಶಿವಗೆ ಹೂವಿನೆಸಳು

ಹಿರಿಕಿರಿಯರೊಳೊಂದೇ ನಯ
ಮಂದಹಾಸ, ಮಮತೆ
ಹೊರಗೆ, ಒಳಗೆ ಒಂದೇ ಬಗೆ
ಆರುಪಾರು ದ್ರಾಕ್ಷೆ
ನೀವು ನಡೆದ ನೆಲವು
ಸೌಶೀಲ್ಯದ ಸೀಮೆ
ಊದಬತ್ತಿ ಸುತ್ತಲೂ ಪರಿ –
ಮಳಿಸಿದಂತೆ ತಾನೆ

ಎಂಟು ದಶಕದುಸುರಿನಲ್ಲಿ
ಕುಸುಮ ಗಂಧ ತೀಡಿ
ಸುಮ್ಮಾನದಿ ಮರೆಯಾದಿರಿ
ದೇವಪೂಜೆಗಾಗಿ!

(ಕರಿಕೆ ಕಣಗಿಲು)

ಮಾವಿನಂತೆ ಮೃದು ಮಧುರಾವಾದ ಮಾವನ ಒಡಲಿನಲ್ಲಿ ಅವರ ವಾತ್ಸಲ್ಯದ ಅಮೃತನುಂಡು ಬೆಳೆದಿದ್ದ ಕವಿ ಹೃದಯ, ಮಾವನ ವ್ಯಕ್ತಿತ್ವವನ್ನು ಕವಿತೆಯ ಮೂಲಕ ಅಭಿವ್ಯಕ್ತಗೊಳಿಸಿದುದು ಅನುಪಮವಾಗಿದೆ. ಸೋದರಮಾವ ತಮ್ಮ ಬಾಳಿನುದ್ದಕ್ಕೂ ನಡೆದ ದಾರಿಯು ಸೌಶೀಲ್ಯದ ಸೀಮೆಯಾಗಿತ್ತು. ಊದಬತ್ತಿಯು ತಾನು ಸುಟ್ಟುಕೊಂಡು ಸುತ್ತಲೂ ಪರಿಮಳ ಪಸರಿಸಿದಂತೆ ಆಗಿತ್ತು. ಎಂಭತ್ತು ವರ್ಷ ಬಾಳಿ ಬದುಕಿದ ಸೋದರಮಾವ ಈಶ್ವರಪ್ಪನವರು ದೇವಪೂಜೆಗಾಗಿ ಅರ್ಪಿತವಾದವರೆಂದು ಭಕ್ತಿ-ಶ್ರದ್ಧೆಯಿಂದ ಕವನ

ಪುಷ್ಪವನ್ನು ಅರ್ಪಿಸುತ್ತಾರೆ.

ಕವಿ ಕರ್ಕಿಯವರು ೭೭ ವರುಷಗಳ ತುಂಬುಜೀವನ ಬಾಳಿ, ದಿನಾಂಕ ೧೬-೧-೧೯೮೪ರಂದು ವಿಶ್ವ ಮಹಾಬಯಲಿನಲಿ ಬಯಲಾದರು. ಶ್ರೀ ಕರ್ಕಿಯವರು ಸದುವಿನಯ ಸದಾಚಾರ ಸದ್ಭಾವನೆಯ ಸಂಗಮವಾಗಿದ್ದರು. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬ ನಾಣ್ಣುಡಿಯಂತೆ ಬಾಳಿ ಬದುಕಿದವರು.

ಡಾ॥ ಕರ್ಕಿಯವರ ಮಗಳು ಶೈಲಜಾ ತಮ್ಮ ತಂದೆಯವರನ್ನು ಕುರಿತು ಬರೆದ ಶ್ರದ್ಧಾಪೂರ್ಣ ಕವಿತೆಯು ಈ ಶತಮಾನೋತ್ಸವ ಸಂದರ್ಭದಲ್ಲಿ ಸ್ಮರಣೀಯವಾಗಿದೆ.

ಉದಯಿಸಿ ಬಾ ತಂದೆ

ಈ ಜಗದ ಕತ್ತಲೆಯ
ಕಳೆಯಲು ಬಾ ತಂದೆ
ಇನ್ನೊಮ್ಮೆ ಈ ಜಗದಿ
ಉದಯಿಸಿ ಬಾ ಎಂದೆ

ಶಾಂತಿ ಸಹನೆಯ ಮೂರ್ತಿ
ಕವಿಗಳಿಗೆ ನೀ ಸ್ಫೂರ್ತಿ
ಕರಕಿಯ ಬಳ್ಳಿಯಾಂಗ
ಹಬ್ಬೈತೋ ನಿಮ್ಮಯ ಕೀರ್ತಿ

ಸವಿ ಛವಿ ರುಚಿ ಶುಚಿ
ಭಾವ ತುಂಬಿ ಹಾಡಿದ್ದೆ
ತಾಳ ಲಯದಲಿ ನೀನು
ಜೀವನ ನಡೆಸಿದ್ದೆ

ಅನ್ಯಾಯ ಕಂಡಾಗ
ನೀ ಸಿಡಿದೆದ್ದೆ
ನ್ಯಾಯ ದೇವತೆಗೆ ನೀ
ತಲೆಬಾಗಿ ನಡೆದಿದ್ದೆ

ಒಳಗೊಳಗೆ ನೀನು
ನುಂಗಿಕೊಂಡಿದ್ದೆ ದುಃಖ
ಎಲ್ಲರೊಡನೆ ನೀನು

ಹಂಚಿಕೊಂಡಿದ್ದೆ ಸುಖ
ಈ ನಾಡು ನುಡಿಮ್ಯಾಗ
ನಿನಗಿತ್ತೋ ಬಲು ಪ್ರೀತಿ
ಹಾಡಿ ಹೊಗಳಿದಿರೆಲ್ಲ
ನಮ್ಮಯ ಸಂಸ್ಕೃತಿ
ಇನ್ನೊಮ್ಮೆ ಈ ಜಗದಿ
ಉದಯಿಸಿ ಬಾ ತಂದೆ
ಕನ್ನಡ ಜ್ಯೋತಿಯ
ಬೆಳಗೋಣ ಬಾ ಎಂದೆ.

–ಶೈಲಜಾ ಆಯ್. ತಂಬದ, ಹುಬ್ಬಳ್ಳಿ
(ಡಾ॥ ಕರ್ಕಿ ಅವರ ಮಗಳು)

'ಕನ್ನಡ ನಾಡಿನಲಿ, ಈ ಜಗದಲಿ ಇನ್ನೊಮ್ಮೆ ಉದಯಿಸಿ ಬಂದು, ಕನ್ನಡ ಜ್ಯೋತಿಯ ಬೆಳಗೋಣ ಬಾ ತಂದೆ' ಎಂಬ ಮಗಳ ಹಂಬಲವು ಇದು ಕನ್ನಡನಾಡಿನ ಎಲ್ಲ ಮಕ್ಕಳ ಹಂಬಲವೂ ಆಗಿದೆ.

ಮಗಳು ಶೈಲಜಾ ತಮ್ಮ ತಂದೆಯವರ ಬಗ್ಗೆ ಹೇಳಿದ ಮಾತುಗಳು – ಡಾ॥ ಕರ್ಕಿ ಅವರದು ತೂಕ ತಪ್ಪದ ಬದುಕು. ಪರಿಶುದ್ಧ ಮನಸ್ಸು, ಬಾಳಿನಲ್ಲಿ ಬಂದದ್ದನ್ನು ಸಂತೋಷದಿಂದ ಸ್ವೀಕರಿಸುವ ಸ್ವಭಾವ, ಹೆಚ್ಚಿನ ಯಾವ ಆಶೆಯನ್ನು ಅವರು ಪಟ್ಟವರಲ್ಲಾ, ಎಂದಿಗು ಸ್ಥೈರ್ಯ ಕಳೆದುಕೊಂಡವರಲ್ಲ. ಅವರೆಂದೂ ಹೂವನೆತ್ತಿಕೊಂಡು ದೇವರ ಗುಡಿಗೆ ಹೋದವರಲ್ಲ. ಮನವೆಂಬ ಮಂದಿರದಲ್ಲಿ ದೇವರನ್ನು ಪೂಜಿಸುತ್ತಿದ್ದರು. ತಮ್ಮ ಕಾವ್ಯವೆಂಬ ಪುಷ್ಪದಿಂದ ದೇವರನ್ನು ಪೂಜಿಸುತ್ತಿದ್ದರು. ತಾವು ದಿನನಿತ್ಯ ಮಾಡುವ ಕಾಯಕದಲ್ಲಿಯೇ ದೇವರನ್ನು ಕಾಣುತ್ತಿದ್ದರು. 'ಹಸನು ಮನದಿ ಗೈವ ದುಡಿಮೆ ದಿನದ ಸಹಜ ಪ್ರಾರ್ಥನೆ' ಎಂದು ಹಾಡಿದ್ದಾರೆ. ಈ ಮಾತುಗಳಲ್ಲಿ ಡಾ॥ ಕರ್ಕಿ ಅವರ ವ್ಯಕ್ತಿತ್ವದ ದರ್ಶನ ಮಾಡಿಕೊಳ್ಳಬುದು.

ಈ ಶತಮಾನೋತ್ಸವ ಸಂದರ್ಭದಲ್ಲಿ ಡಾ॥ ಕರ್ಕಿಯವರ ಜೀವನ ಸಾಧನೆಯ ನೆನೆದು, ಸಮಸ್ತ ಕನ್ನಡಿಗರ ಹೃದಯದಲಿ 'ಕನ್ನಡದೀಪ' ಬೆಳಗಿದ ಕವಿಚೇತನಕ್ಕೆ ಗೌರವಪೂರ್ವಕ 'ನಮನ' ಸಲ್ಲಿಸೋಣ

ನಮನ

ಸದುವಿನಯ ಸದಾಚಾರ ಸದ್ಭಾವನೆಯ ಮೂರ್ತಿ
ಕವಿ ಸಂಕುಲದಲಿ ಅಜರಾಮರ ನಿಮ್ಮಯ ಕೀರ್ತಿ
'ನಕ್ಷತ್ರಗಾನ'ವನಾಲಿಸಿ 'ಭಾವತೀರ್ಥ'ಕೆ ತಂದು
ಕನ್ನಡಿಗರ ಕರಸ್ಥಲಕೆ 'ಗೀತಗೌರವ'ವನಿತ್ತು
'ಕರಿಕೆಕಣಗಿಲು' ಮೂಲಕ ಭಾವ ಸಂಬಂಧ ಬೆಸೆದು
ಪ್ರಕೃತಿಯ ಮಡಿಲಲ್ಲಿ 'ಬಣ್ಣದ ಚೆಂಡು' ಆಡಿ

'ತನನ ತೋಂ' ಎಂದು ಮಕ್ಕಳಂದದಿ ಕುಣಿದಾಡಿ
ಕನ್ನಡತಾಯಿಗೆ ಭಕ್ತಿಯಿಂದ 'ನಮನ' ಸಲ್ಲಿಸಿದ
ಸದ್ಭಕ್ತ ಕವಿಯೇ ನಿನಗೆ ನಮೋ ನಮಃ

ಕನ್ನಡ ಸಾಹಿತ್ಯಕ್ಕೆ 'ಛಂದೋವಿಕಾಸ'ವ ನೀಡಿ
ಜೀವನ ಪ್ರಕೃತಿ ಕಲೆ ಕಾವ್ಯಕೆ 'ನಾಲ್ದೆಸೆಯ ನೋಟ' ಬೀರಿ
'ಮಕ್ಕಳ ಶಿಕ್ಷಣ'ಕ್ಕೆ ಅಡಿಪಾಯ ಹಾಕಿ,
'ಐವರು ಶಿಕ್ಷಣ ತಜ್ಞರ ಬೋಧನಾ ಕ್ರಮ'ವ ತಿಳಿಸಿ
'ಸಾಹಿತ್ಯ ಸಂಸ್ಕೃತಿ – ಶ್ರುತಿ'ಯ ಪರಿಮಳವ ಬೀರಿದ
ಸುಸಂಸ್ಕೃತ ಕವಿಯೇ ನಿನಗೆ ನಮೋ ನಮಃ

'ಅಂಗಡಿ ದಂಪತಿಗಳ' ಅಂತಃಕರಣದಲಿ ಮಿಂದು
ಕೋಟಿ ಕೋಟಿ ಕನ್ನಡಿಗರ ಹೃದಯದೇಗುಲದಿ
ಕನ್ನಡ ದೀಪವ ಹಚ್ಚಿ
ಕನ್ನಡಾಂಬೆಯ ಕೀರ್ತಿಯನು
ದಿಗ್ ದಿಗಂತದಾಚೆಗೂ ಬೆಳಗಿದ
ನವೋದಯದ ನವ ಮನ್ವಂತರದ ಕವಿ
ಕರ್ಕಿಯೇ ನಿಮ್ಮಡಿಗೆ ನಮೋ ನಮಃ

–ಪ್ರೊ. ಸಿದ್ಧಣ್ಣ ಲಂಗೋಟಿ (ಸ್ವರಚಿತ ಕವನ)

ಗ್ರಂಥ ಋಣ

೧. ಡಾ॥ ಕರ್ಕಿಯವರ ಸಮಗ್ರ ಗದ್ಯ ಹಾಗೂ ಪದ್ಯ ಕೃತಿಗಳು
೨. ಕಾವ್ಯ ಗೌರವ (ಸಂಭಾವನಾ ಗ್ರಂಥ) –ಸಂ. ಡಾ. ಬುದ್ದಣ್ಣ ಹಿಂಗಮಿರೆ –ಶ್ರೀ ನಿರಂಜನ ವಾಲಿಶೆಟ್ಟರ
೩. ಡಾ॥ ಡಿ.ಎಸ್. ಕರ್ಕಿ –ಪ್ರೊ. ಎಂ.ಆಯ್. ಕಣಗಲಿ
೪. ಕರಿಕೆ ಕಣಗಿಲು ಒಂದು ಸಮಾಲೋಚನೆ –ಡಾ. ಗುರುಲಿಂಗ ಕಾಪಸೆ
೫. ಭಾವಲೋಕದ ನಕ್ಷತ್ರ ಡಾ॥ ಕರ್ಕಿ –ಪ್ರಿ. ಪಿ.ಕೆ. ಭಾಗೋಜಿ
೬. ಹಚ್ಚೇವು ಕನ್ನಡದ ದೀಪ – ಸಂ. ಜಗದೀಶ ಮಂಗಳೂರಮಠ
೭. ನೆನಹು (ಡಾ॥ ಕರ್ಕಿ ಹಾಗೂ ಸೂಕಲ್ಲರ ಸ್ಮರಣ ಸಂಪುಟ) – ಸಂ. ಸ, ರಾ. ಸುಳಕೂಡೆ – ಅಶೋಕ ಉಳ್ಳೇಗಡ್ಡಿ – ಸಿದ್ಧಣ್ಣ ಲಂಗೋಟಿ – ರಾಮಣ್ಣ ಕೊಣ್ಣೂರ
೮. ಕನ್ನಡ ಕವಿ – ಕಾವ್ಯ ಪರಂಪರೆ – ಸಂ. ಪ್ರೊ. ಸಿದ್ಧಣ್ಣ ಲಂಗೋಟಿ
೯. ಬಸವ ಬೆಳಗು– ಪತ್ರಿಕೆ – ಗೌ.ಸಂ. ಪ್ರೊ. ಸಿದ್ಧಣ್ಣ ಲಂಗೋಟಿ

ಅನುಬಂಧ - ೧

ಡಾ. ಡಿ.ಎಸ್. ಕರ್ಕಿಯವರ ವಂಶವೃಕ್ಷ

(ಬಳಗದವರ ಮಾಹಿತಿ ಸಹಿತ)

ಶಿವಲಿಂಗಪ್ಪ
(ಮೂಲ ಪುರುಷ)

ಸಂಗನಬಸವಪ್ಪ

- ಶಿವಲಿಂಗಪ್ಪ
- ಅಡಿವೆಪ್ಪ
- ಚನಬಸವಪ್ಪ
- ಸಿದ್ಲಿಂಗಪ್ಪ
  - ಸಿದ್ದಪ್ಪ
    - ದುಂಡಪ್ಪ + ಪಾರ್ವತಿ (ಕವಿ,
      - ೧. ರಾಜಶೇಖರ(ಲಿಂ)
      - ೨. ಆನಂದ(ಲಿಂ)
      - ೩. ರವೀಂದ್ರ
      - ೪. ಶಶಿಕಾಂತ
      - ೫. ಶೈಲಜಾ (ಹುಬ್ಬಳ್ಳಿ, ತಂಬದರ ಸೊಸೆ)
    - ಸಿದ್ಲಿಂಗಪ್ಪ + ಗೌರಮ್ಮ (ಆಯುರ್ವೇದ ವೈದ್ಯ)
      - ೧. ಸುಮಂಗಲಾ(ಲಿಂ) (ಸೊಪ್ಪಡ್ಲ ಬೆಲ್ಲದರ ಸೊಸೆ)
      - ೨. ವಿಜಯ (ಪ್ರಿ.ನಿಜಲಿಂಗಪ್ಪ ಕಾಲೇಜ, ಬೆಂಗಳೂರು)
      - ೩. ರಜತಾ+ ಸಿದ್ರಾಮಪ್ಪ ಕತ್ತಿ (ತಾಳಿಕೋಟಿ)
      - ೪. ಮೋಹನ
      - ೫. ಶೈಲಾ (ಭೋಜ ಬುರ್ಜಿಯವರ ಸೊಸೆ)
      - ೬. ಅಶ್ವಿನಿ
      - ೭. ಮಹಾದೇವಿ+ಚಂದ್ರು ಮುಂಗರವಾಡಿ (ತೇರಣ)
      - ೮. ಸಿದ್ಧಪ್ಪ (ಲಿಂ)
    - ಗಂಗಪ್ಪ+ ಕೀರ್ತೆಪ್ಪ ಕಣಗಲಿ (ಬಿ. ಬಾಗೇವಾಡಿ)
      - ಮಹಾನಂದಾ + ಚಂದ್ರಶೇಖರ ಕರ್ಕಿ (ಕೊಪ್ಪ)
  - ಶ್ರೀಶೈಲಪ್ಪ
- ಈಶ್ವರಪ್ಪ
- ಪರಪ್ಪ

ಪ್ರೊ. ಸಿದ್ಧಣ್ಣ ಲಂಗೋಟಿ ಅವರ ಕೃತಿಗಳು

೧.	ಅಲ್ಲಮಪ್ರಭುದೇವರ ಜೀವನ ಸಂದೇಶ	೧೯೭೯
೨.	ಅಕ್ಕಮಹಾದೇವಿಯ ಜೀವನ ದರ್ಶನ	೧೯೭೯
೩.	ಲಿಂಗಾಯತ ಧರ್ಮ ಸಮಾಜ ತತ್ವಜ್ಞಾನ	೧೯೭೯
೪.	ಲಿಂಗಾಯತ ಧರ್ಮದ ಮೂಲತತ್ವಗಳು	೧೯೭೯
೫.	ಶಿವಯೋಗಿಣಿ ಅಕ್ಕನಾಗಮ್ಮ (ಸಂಪಾದಿತ)	೧೯೭೯
೬.	ಗಣನಾಯಕ ಮಡಿವಾಳ ಮಾಚಿದೇವರು	೧೯೭೯
೭.	ಮರಣವೇ ಮಹಾನವಮಿ	೧೯೮೦
೮.	ಷಟಸ್ಥಲ ಚಕ್ರವರ್ತಿ ಚೆನ್ನಬಸವಣ್ಣನವರು	೧೯೭೯
೮.	ಬಸವಬೆಳಗು (ಸಂಪಾದಿತ)	೧೯೮೦
೧೦.	ಪ್ರಭುವಿನ ವಾಣಿಯಲ್ಲಿ ಬಸವಣ್ಣನವರು	೧೯೮೦
೧೧.	ವಚನ ಸಂಶೋದನ ಪಿತಾಮಹ ಫ.ಗು.ಹಳಕಟ್ಟಿಯವರು	೧೯೮೦
೧೨.	ಬಸವಣ್ಣನವರ ಬಯ್ಗುಳಗಳು	೧೯೮೧
೧೩.	ಅಕ್ಕ ಕಂಡ ಅಣ್ಣಾ	೧೯೮೧
೧೪.	ಅಂಬಿಗರ ಚೌಡಯ್ಯ	೧೯೮೧
೧೫.	ಶರಣರ ಶಿವರಾತ್ರಿ	೧೯೮೨
೧೬.	ಸ್ವಾಮಿ ವಿವೇಕಾನಂದರ ದೇಶಭಕ್ತಿ ಕಲ್ಪನೆ	೧೯೮೨
೧೭.	ಬಸವಾದಿ ಶರಣರ ವಚನಾಮೃತ (ಸಂಪಾದಿತ)	೧೯೮೩
೧೮.	ವಿಭೂತಿ ನಿರ್ಮಾಣ ವಿಧಾನ	೧೯೮೪
೧೯.	ಬಾಚಿಕಾಯಕದ ಬಸವಪ್ಪ -ಕಾಳವ್ವೆ	೧೯೮೪
೨೦.	ಶರಣರು ಹಾಗೂ ಮೂಢನಂಬಿಕೆಗಳು	೧೯೮೪
೨೧.	ಇಷ್ಟಲಿಂಗ ನಿರ್ಮಾಣ ವಿಧಾನ	೧೯೮೫
೨೨.	ಹಡಪದ ಅಪ್ಪಣ್ಣ -ಲಿಂಗಮ್ಮ	೧೯೮೫
೨೩.	ಶ್ರೀ ಗುರುಸಿದ್ಧಪ್ರಭುದೇವರು	೧೯೮೫
೨೪.	ಇಷ್ಟಲಿಂಗ ಪೂಜಾವಿಧಾನ	೧೯೮೫
೨೫.	ಫಕ್ಕೀರಪ್ಪ ಮುರಗೋಡ ಮಾಸ್ತರು	೧೯೮೫
೨೬.	ಶಿವಶರಣರ ಕ್ರಾಂತಿ (ಕ.ವಿ.ವಿ.ಪ್ರಕಟಣೆ)	೧೯೮೬
೨೭.	ವಿಶ್ವಗುರು ಬಸವಣ್ಣನವರ ವಚನಗಳು(ಸಂಪಾದಿತ)	೧೯೮೬
೨೮.	ಕರ್ನಾಟಕದ ಗಾಂಧಿ ಹರ್ಡೇಕರ ಮಂಜಪ್ಪನವರು	೧೯೮೬
೨೯.	ಯುಗ ಪುರುಷ ಚೆನ್ನಬಸವ ಪಟ್ಟಾಧ್ಯಕ್ಷರು	೧೯೮೭
೩೦.	ಬಸವದರ್ಶನ (ಸಂಪಾದಿತ)	೧೯೮೭
೩೧.	ವಚನಸಾಹಿತ್ಯ : ತಾತ್ವಿಕ ವಿವೇಚನೆ	೧೯೮೭
೩೨.	ವಿಶ್ವವಿಖ್ಯಾತ ತತ್ವಜ್ಞಾನಿ ಡಾ. ರಾಧಾಕೃಷ್ಣನ್‌ರು	೧೯೮೮
೩೩.	ಧರ್ಮಗುರು ಜಗಜ್ಯೋತಿ ಬಸವಣ್ಣನವರು	೧೯೮೮

೩೪. ಅಲ್ಲಮ ಪ್ರಭುದೇವರ ವಚನಗಳು (ಸಂಪಾದಿತ) ೧೯೮೯
೩೫. ಬಸವಣ್ಣನವರು ಮತ್ತು ಜಾಗತಿಕ ಶಾಂತಿ ೧೯೮೯
೩೬. ಬಸವಭಕ್ತ ಘನಮಠ ಶಿವಯೋಗಿಗಳು ೧೯೮೯
೩೭. ಚೆನ್ನಬಸವಣ್ಣನವರ ವಚನಗಳು(ಸಂಪಾದಿತ) ೧೯೮೯
೩೮. ಬಸವಭಕ್ತ ಅಥಣಿ ಶಿವಯೋಗಿಗಳು ೧೯೮೯
೩೯. ದೇವದಾಸಿ ಪದ್ಧತಿ ವಿಮೋಚನೆ ಹಾಗೂ ಬಸವಣ್ಣನವರು ೧೯೮೯
೪೦. ಸಿದ್ಧರಾಮೇಶ್ವರ ವಚನಗಳು (ಸಂಪಾದಿತ) ೧೯೯೦
೪೧. ಡಾ. ಜಚನಿ ಅಂದು-ಇಂದು ಒಂದು ವಿಮರ್ಶೆ ೧೯೯೦
೪೨. ಶ್ರೀಗುರುಬಸವಮಂಟಪ ನಡೆದು ಬಂದ ದಾರಿ ೧೯೯೧
೪೩. ಮುರಗೋಡ ಮಹಾಂತಜ್ಜನವರು ೧೯೯೨
೪೪. ಬಸವಕಲ್ಯಾಣ ದರ್ಶನ ೧೯೯೪
೪೫. ಮಹಾಚೈತ್ರ (ವಿಮರ್ಶೆ) ೧೯೯೪
೪೬. ಬಸವಾದಿ ಶರಣರ ವಚನಜ್ಯೋತಿ (ಸಂಪಾದಿತ) ೧೯೯೬
೪೭. ಬಸವ ವಚನ ದೀಪ್ತಿ ಒಂದು ವಿಮರ್ಶೆ ೧೯೯೬
೪೮. ಕುಮಾರ ಕಕ್ಕಯ್ಯನ ವಚನಗಳು (ಸಂಪಾದಿತ) ೧೯೯೭
೪೯. ಕುಮಾರ ಕಕ್ಕಯ್ಯ ಪೋಳ ೧೯೯೮
೫೦. ಬೀಳೂರು ಗುರುಬಸವ ಮಹಾಸ್ವಾಮಿಗಳು ೧೯೯೮
೫೧. ಜೇಡರ ದಾಸಿಮಯ್ಯ-ದುಗ್ಗಳೆಯರ ವಚನಗಳು (ಸಂ) ೧೯೯೮
೫೨. ಬಸವಾದಿ ಶರಣರ ಶಿವಯೋಗದ ವಚನಗಳು (ಸಂ) ೧೯೯೯
೫೩. ಜಗಜ್ಯೋತಿ ಬಸವೇಶ್ವರ ಅಂಕಿತದ ಸಿಲಂ ವಚನಗಳು ೨೦೦೦
೫೪. ಬಂಥನಾಳ ಸಂಗನಬಸವ ಶಿವಯೋಗಿಗಳು ೨೦೦೦
೫೫. ಕಲ್ಯಾಣ ನಾಡಿನ ಶರಣಪರಿಷತ್ತು ನಡೆದು ಬಂದ ದಾರಿ ೨೦೦೧
೫೬. ಶರಣ ಕುಮಾರ ಕಕ್ಕಯ್ಯ ೨೦೦೧
೫೭. ಬಸವ ಬೆಳೆ ೨೦೦೨
೫೮. ಶಿವಯೋಗಿ ವೇಮನರ ವಚನಗಳು (ಸಂ) ೨೦೦೩
೫೯. ಕನ್ನಡ ಕವಿ-ಕಾವ್ಯ-ಪರಂಪರೆ (ಸಂ) ೨೦೦೪
೬೦. ದರ್ಪಣ-ಸ್ಮರಣಸಂಚಿಕೆ (ಸಂ) ೨೦೦೪
೬೧. ಲಿಂಗಾಯತ ಧರ್ಮ-ದರ್ಶನ ೨೦೦೫
೬೨. ಕಾಯಕ ಸಂಜೀವನಿ ಅಭಿನಂದನ ಗ್ರಂಥ (ಸಂ) ೨೦೦೬
೬೩. ಬಸವಣ್ಣನವರು ೨೦೦೭
೬೪ *ನೆನಹು(ಕರ್ಕಿ)ಹಾಗೂ ಸಣಕಲ್ಲರ ಸ್ಮರಣ ಸಂಪುಟ(ಸಂ)* ೨೦೦೮
೬೫. *ಡಾ. ಡಿ.ಎಸ್.ಕರ್ಕಿ* ೨೦೦೮
೬೬ *ಬಸವ ಜ್ಯೋತಿ ಮಹಾಂತ ಶಿವಯೋಗಿಗಳು* ೨೦೧೧
೬೭ *ಪರಮದಾಸೋಹಿ ವಿಜಯ ಮಹಾಂತ ಶಿವಯೋಗಿಗಳು* ೨೦೧೨

ಪ್ರೊ. ಸಿದ್ಧಣ್ಣ ಲಂಗೋಟಿ ಅವರು ಬಸವಭೂಮಿಯಾದ ವಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಚಾಂದಕವಠೆ ಗ್ರಾಮದ ಲಿಂಗಾಯತ ಕೃಷಿ ಕುಟುಂಬದಲ್ಲಿ ಜನಿಸಿ (೧೯೫೧). ಚಾಂದಕವಠೆ, ಕನ್ನೊಳ್ಳಿ ಗ್ರಾಮಗಳಲ್ಲಿ ಪ್ರಾಥಮಿಕ ಶಿಕ್ಷಣ, ಸಿಂದಗಿಯಲ್ಲಿ ಹೈಸ್ಕೂಲು ಶಿಕ್ಷಣ, ವಿಜಾಪುರದಲ್ಲಿ ಪದವಿ ಶಿಕ್ಷಣ, ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ. ತತ್ತ್ವಜ್ಞಾನ, ಎಂ.ಎ. ಹಿಂದಿ, ಎಂ.ಎ. ಕನ್ನಡ, ಎಲ್.ಎಲ್‌ಬಿ. ಕಾನೂನು ಶಿಕ್ಷಣ, ಸಿವಾಯ್, ಇಡಿ ಯೋಗ ಶಿಕ್ಷಣ ಪಡೆದವರಾಗಿದ್ದಾರೆ.

ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಲೇ, ಸಾಹಿತ್ಯ ಕೃಷಿಕೈಕೊಂಡಿದ್ದಾರೆ. ಭಾರತೀಯ ಹಾಗೂ ಪಾಶ್ಚಿಮಾತ್ಯ ತತ್ತ್ವಜ್ಞಾನ ಚಿಂತಕರೂ, ಬಸವತತ್ತ್ವಜ್ಞಾನದ ಅನುಭಾವಿ ಲೇಖಕರೂ ಆಗಿರುವ ಸಿದ್ಧಣ್ಣ ಲಂಗೋಟಿಯವರು ೭೫ ಕ್ಕೂ ಮಿಕ್ಕಿ ಗ್ರಂಥಗಳ ರಚನೆ ಹಾಗೂ ಸಂಪಾದನೆ ಮಾಡಿದ್ದಾರೆ.

ಕ್ರಿ.ಶ. ೧೯೯೦ ರಲ್ಲಿ ಹಾಗೂ ಕ್ರಿ.ಶ. ೨೦೦೦ ಇಸ್ವಿಯಲ್ಲಿ ಪಾಶ್ಚಿಮಾತ್ಯ ಹಾಗೂ ಪ್ರಪಂಚದ ಪ್ರಮುಖ ದೇಶಗಳಾದ ಇಂಗ್ಲಂಡ, ಅಮೇರಿಕಾ, ಪ್ರಾನ್ಸ್, ಇಟಲಿ, ಜರ್ಮನಿ, ಕೆನಡಾ, ಆಸ್ಟ್ರಿಯಾ, ಹಾಲಂಡ, ಸಿಂಗಾಪುರ, ಅರಬ ರಾಷ್ಟ್ರಗಳ ಪ್ರವಾಸ ಕೈಕೊಂಡು ಬಸವತತ್ತ್ವಜ್ಞಾನ ಕುರಿತು ಉಪನ್ಯಾಸ ನೀಡಿ, ತತ್ತ್ವ ಪ್ರಸಾರಗೈದು ಬಂದಿದ್ದಾರೆ.

೧೯೭೭ ರಲ್ಲಿ ಬಸವತತ್ತ್ವ ಪ್ರಸಾರ ಸಂಸ್ಥೆ ಸ್ಥಾಪಿಸಿ ಶರಣ ಫ.ಗು. ಹಳಕಟ್ಟಿಯವರ ಶಿವಾನುಭವ ಪತ್ರಿಕೆಗೆ ಮರುಜನ್ಮ ನೀಡಿದ್ದಾರೆ. ೧೯೮೭ ರಲ್ಲಿ ಹರ್ಡೇಕರ ಮಂಜಪ್ಪನವರ ಶತಮಾನೋತ್ಸವ ಆಚರಿಸಿ 'ಶರಣಸಂದೇಶ'ವನ್ನು 'ಬಸವಬೆಳಗು' ಹೆಸರಿನಲ್ಲಿ ಮರುಹುಟ್ಟಿಗೆ ಕಾರಣೀಕರ್ತರಾಗಿದ್ದಾರೆ. ೧೯೯೦ ರಲ್ಲಿ ಇಂಗ್ಲೆಂಡಿನಲ್ಲಿ 'ಬಸವ ಇಂಟರನ್ಯಾಶನಲ್ ಫೌಂಡೇಶನ್' ಪ್ರಾರಂಭಿಸಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಇಳಕಲ್ಲ ಶರಣ ಸಿದ್ಧಾಂತ ವಿದ್ಯಾಪೀಠದ ಸಂಚಾಲಕರಾಗಿ ೪೦ ವರುಷಗಳಿಂದ ಶಿವಾನುಭವ ಶಿಬಿರಗಳನ್ನು ಸಂಘಟಿಸಿದ್ದಾರೆ. ಸಾವಿರಾರು ವಚನಗಳನ್ನು ಬರೆದು ಆಧುನಿಕ ವಚನಕಾರರಲ್ಲಿ ಒಬ್ಬರಾಗಿದ್ದಾರೆ.

ಗದಗ–ಬೆಟಗೇರಿ

–ಅಂಬಿಗರ ಕುಮಾರಚೌಡಯ್ಯ
ಆಧುನಿಕ ವಚನಕಾರರು